# ಗಣಿತ

# MATHEMATICS

## ತರಗತಿ IV

## STANDARD IV

## ಭಾಗ – 2

## Part - 2

ಕೇರಳ ಸರಕಾರ
ಶಿಕ್ಷಣ ಇಲಾಖೆ

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT), ಕೇರಳ
2016

KT 671-1/Maths-4 (K) (Vol-2)

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ,
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗಾ,
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗಾ,
ತವಶುಭ ನಾಮೇ ಜಾಗೇ,
ತವಶುಭ ಆಶಿಷ ಮಾಗೇ,
ಗಾಹೇ ತವ ಜಯ ಗಾಥಾ,
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯ ವಿಧಾತಾ,
ಜಯಹೇ, ಜಯಹೇ, ಜಯಹೇ,
ಜಯ ಜಯ ಜಯ ಜಯಹೇ!

## ಪ್ರತಿಜ್ಞೆ

ಭಾರತವು ನನ್ನ ದೇಶ, ಭಾರತೀಯರೆಲ್ಲರೂ ನನ್ನ ಸಹೋದರ ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣ ಪರಂಪರೆಗೆ ನಾನು ಹೆಮ್ಮೆ ಪಡುತ್ತೇನೆ.

ನಾನು ನನ್ನ ತಂದೆ ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ.

ನಾನು ನನ್ನ ದೇಶದ ಮತ್ತು ಜನತೆಯ ಕ್ಷೇಮ ಹಾಗೂ ಸಮೃದ್ಧಿಗಾಗಿ ಸದಾ ಪ್ರಯತ್ನಿಸುತ್ತೇನೆ.

*Prepared by* :
**State Council of Educational Research and Training (SCERT)**
Poojappura, Thiruvananthapuram 695 012, Kerala

*Website* : www.scertkerala.gov.in
*E-mail* : scertkerala@gmail.com
Phone : 0471-2341883, Fax : 0471-2341869
Typesetting and Layout : SCERT
First Edition: 2015, Reprint: 2016
Printed at : KBPS, Kakkanad, Kochi-30
© Department of Education, Government of Kerala

ಪ್ರೀತಿಯ ಮಕ್ಕಳೇ,

ಗಣಿತದ ಹಲವು ಪ್ರಾಥಮಿಕ ತಿಳುವಳಿಕೆಗಳನ್ನು ನಾವು ಗಳಿಸಿಕೊಂಡೆವು. ಇನ್ನು ಹಲವಾರು ವಿಚಾರಗಳನ್ನು ತಿಳಿದುಕೊಳ್ಳಬೇಕಾಗಿದೆ. ಗೆಳೆಯರೊಂದಿಗೆ ಗುಂಪಾಗಿ ಆಡುತ್ತಾ, ಹಾಡುತ್ತಾ, ಲೆಕ್ಕ ಮಾಡುತ್ತಾ, ಚಿತ್ರ ರಚಿಸುತ್ತಾ ಸಮಸ್ಯೆಗಳನ್ನು ಪರಿಹರಿಸುತ್ತಾ ಗಣಿತವನ್ನು ಕಲಿಯೋಣ. ಚಿಂತಿಸಿ ಸಂಶೋಧನೆಗಳನ್ನು ನಡೆಸಿ ಮುಂದೆ ಸಾಗೋಣ.

ಡಾ.ಜೆ.ಪ್ರಸಾದ್
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ

# TEXT BOOK DEVELOPMENT
# TEAM PARTICIPANTS

**Suresh C.**
G.M.L.P.S. Cherumuk
Kozhikode

**Ashraf C.V.**
Vanimel M.U.P.S
Nadapuram, Vadagara

**Sasidharan V.P.**
BRC Irritti

**Prashanth K.P.**
Devadhar U.P.S
Nediyirupp, Malappuram

**Manikantan K.O.V.**
Pattiyamma A.U.P.S
Karivellur, Kannur

**Thulasidharan Pilla K.G**
Govt. U.P.S Charipparamba, Kollam

**Shajahan V.**
G.M.U.P.S. Melmuri
Malappuram

**Jabir K.**
G.H.S. Adoor
Kasaragod

**Muhammed Nazar**
G.H.S. Kodvayur
Palakkad

**Unnikrishnan V.T.**
Ponnani Girls H.S.S
Malappuram

## Artist
**Harikumar**

## Cover
**Rakesh P. Nair**

## Experts
**Dr. Radhakrishnan Chettiyar**
Rtd. Prof. University College
Thiruvananthapuram

**Dr. E. Krishnan**
Rtd. Prof. University College
Thiruvananthapuram

**Dr. Ramesh Kumar**
Asst. Prof. Kerala University
Karyavattam Thiruvananthapuram

**C.Venugopal**
Asst. Prof. College of Teacher Education
Thiruvananthapuram

## Kannada Version
**Prapullachandra C.H.**
HSA, GHSS Adoor.

**Rajesh S.**
SSPALPS Udayagiri

**Jayalatha S.**
GBUPS Peradala

**Sudhama K.**
PD Teacher, GHSS Adoor

## Experts
**Shridhara N.**
Asst. Professor, Govt. College, Kasaragod.

## Academic Co-ordinator
**Sujith Kumar G.,** Research Officer, SCERT, Thiruvananthapuram.

## Co-ordinator
**Dr. Faisal Mavulladathil,** Research Officer, SCERT, Thiruvananthapuram.

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ, ಪೂಜಪ್ಪುರ, ತಿರುವನಂತಪುರ – 695 012



# ಅನುಕ್ರಮಣಿಕೆ


6 ಕೂಡಿಸದೆ ಕೂಡಿಸುವ ............ 87

7 ಸಮಾನವಾದುದು ಮತ್ತು ಬಾಕಿ ಇರುವುದು ............ 103

8 ಎರಡನೇ ಒಂದು ನಾಲ್ಕನೇ ಒಂದು ............ 119

9 ದೂರ ಮತ್ತು ಭಾರ ............ 127

10 ಮಾಹಿತಿ ಸಂಗ್ರಹ ............ 145


11 ಹತ್ತು ಸಾವಿರಕ್ಕೂ ಆಚೆ ............ 153




## ಈ ಪುಸ್ತಕದಲ್ಲಿ ಅನುಕೂಲಕ್ಕಾಗಿ ಕೆಲವು ಸಂಕೇತಗಳನ್ನು ಉಪಯೋಗಿಸಲಾಗಿದೆ


ಹೆಚ್ಚಿನ ಚಟುವಟಿಕೆ/ಮುಂದುವರಿದ ಚಟುವಟಿಕೆ


ನಾನು ಕಂಡುಕೊಂಡ ವಿಧಾನ


ಸಹಪಾಠಿಗಳು ಕಂಡುಕೊಂಡ ವಿಧಾನ



ಮೌಲ್ಯನಿರ್ಣಯ


ಐ.ಸಿ.ಟಿ. ಸಾಧ್ಯತೆಗಳು


ಪ್ರೋಜೆಕ್ಟ್

# 6 ಕೂಡಿಸದೆ ಕೂಡಿಸುವ

## ಅಡಗಿರುವುದೇನು?




■ ಅಡಗಿರುವ ಚಿತ್ರವನ್ನು ಕಂಡುಹಿಡಿಯಲು ಕೆಳಗೆ ನೀಡಿರುವ ಗುಣಾಕಾರ ಕ್ರಿಯೆಗಳಿಗೆ ಉತ್ತರವಾಗಿ ಬರುವವುಗಳಿಗೆ ಬಣ್ಣ ಕೊಟ್ಟರೆ ಸಾಕು. ಪ್ರಶ್ನೆಗಳಿಗೆ ನೀಡಿರುವ ಅದೇ ಬಣ್ಣವನ್ನು ಮೇಲೆ ಕೊಟ್ಟಿರುವ ಚಿತ್ರದಲ್ಲಿ ಉತ್ತರ ಬರುವ ಕೋಣೆಗಳಿಗೆ ನೀಡಬೇಕು.

| | | | | |
|---|---|---|---|---|
| $7 \times 7 =$ ☐ | $5 \times 8 =$ ☐ | $8 \times 8 =$ ☐ | $6 \times 4 =$ ☐ | $9 \times 8 =$ ☐ |
| $8 \times 6 =$ ☐ | $7 \times 3 =$ ☐ | $9 \times 9 =$ ☐ | $9 \times 3 =$ ☐ | $9 \times 7 =$ ☐ |
| $6 \times 9 =$ ☐ | $9 \times 4 =$ ☐ | $8 \times 7 =$ ☐ | $8 \times 4 =$ ☐ | $5 \times 9 =$ ☐ |

## ಹುಟ್ಟುಹಬ್ಬ

■ ಇಂದು ಮನುವಿನ ಹುಟ್ಟುಹಬ್ಬ. ಪಾಯಸ ತಯಾರಿಸಲು 5 ಪ್ಯಾಕೆಟ್ ಹಾಲು ಖರೀದಿಸಿದರು. ಒಂದು ಪ್ಯಾಕೆಟ್ ಹಾಲಿಗೆ 18 ರೂಪಾಯಿ ಬೆಲೆ ಇದೆ. ಹಾಲಿನ ಒಟ್ಟು ಬೆಲೆ ಎಷ್ಟು? ಹೇಗೆ ಕಂಡುಹಿಡಿಯುವಿರಿ?








18 + 18 + 18 + 18 + 18 = 18 × 5




10 × 5 = 50     8 × 5 = 40

18 × 5 ಎಂಬುವುದು 10 × 5 ರೊಂದಿಗೆ 8 × 5 ನ್ನು ಕೂಡಿಸಿರುವುದಾಗಿದೆಯಲ್ಲವೇ?


$$18 \times 5 = (10 \times 5) + (8 \times 5)$$
$$= 50 + 40$$
$$= 90$$

ಕ್ರಿಯಾರೂಪ

18 ×
5
---
8 × 5 → 40
10 × 5 → 50
---
90

5 ಪ್ಯಾಕೆಟ್ ಹಾಲಿನ ಬದಲು 12 ಪ್ಯಾಕೆಟ್‌ಗಳನ್ನು ಖರೀದಿಸಿದರೋ?

18×12ನ್ನು ಕಂಡುಹಿಡಿಯುವುದು ಹೇಗೆ?




$$18 \times 12 = (10 \times 10) + (10 \times 2) + (8 \times 10) + (8 \times 2)$$
$$= 100 + 20 + 80 + 16$$
$$= 216$$

18×12ನ್ನು ಕಂಡುಹಿಡಿಯಲು 18ನ್ನು 10ರಿಂದ ಮತ್ತು 18ನ್ನು 2ರಿಂದ ಗುಣಿಸಿ ಕೂಡಿಸಿದರೂ ಸಾಕಲ್ಲವೇ.

ಹಾಗಾದರೆ, $18 \times 12 = 18 \times 10 + 18 \times 2$
$= 180 + 36$
$= 216$

ಕ್ರಿಯಾರೂಪ

```
            18 ×
            12
           ----
18 × 2  →   36
18 × 10 →  180
           ----
           216
```

**ಬಾಯಿಲೆಕ್ಕವಾಗಿ ಕಂಡುಹಿಡಿಯಿರಿ**

| | |
|---|---|
| 25 × 12 = 300 ಆಗಿದೆ. | 17 × 12 = 204 ಆಗಿದೆ. |
| 25 × 24 = | 18 × 12 = |
| 25 × 48 = | 19 × 12 = |
| 25 × 6 = | 16 × 12 = |

## ಉಡುಗೊರೆ

■ ಒಂದು ಪೆನ್ನಿಗೆ 26 ರೂಪಾಯಿಯಂತೆ ಬೆಲೆಯಿರುವ ಒಂದು ಡಜನ್ ಕಲರ್ ಪೆನ್ನುಗಳನ್ನು ಮನುವಿಗೆ ಸಹಪಾಠಿಗಳು ಉಡುಗೊರೆಯಾಗಿ ನೀಡಿದರು. ಪೆನ್ನುಗಳನ್ನು ಖರೀದಿಸಲು ಎಷ್ಟು ಹಣ ಖರ್ಚಾಯಿತು?



ಒಂದು ಡಜನ್ ಎಂದರೆ 12 ಆಗಿದೆ.



$$26 \times 12 = (26 \times 10) + (26 \times 2)$$
$$= 260 + 52$$
$$= 312$$

ಕ್ರಿಯಾರೂಪ

| | | |
|---|---|---|
| | | 26 × |
| | | 12 |
| 26 × 2 | → | 52 |
| 26 × 10 | → | 260 |
| | | 312 |

| |
|---|
| 26 × |
| 12 |
| 52 |
| 26 |
| 312 |

ಎರಡನೆಯದಾಗಿ ಹತ್ತರ ಸ್ಥಾನದ ಅಂಕೆಯಾದ 1ರಿಂದ ಗುಣಿಸಿ ಹತ್ತರ ಸ್ಥಾನದಿಂದ ಆರಂಭಿಸಿ ಎಡಭಾಗದಲ್ಲಿ ಬರೆಯುವುದು.

26ನ್ನು 12ರಿಂದ ಗುಣಿಸುವಾಗ ಮೊದಲು ಒಂದರ ಸ್ಥಾನದ ಅಂಕೆಯಾದ 2ರಿಂದ ಗುಣಿಸಿ ಬರೆಯುವುದು.

? ಪಾಯಸ ತಯಾರಿಸಲು 3 ಕಿಲೋ ಗ್ರಾಂ ಸಕ್ಕರೆಯನ್ನು ಖರೀದಿಸಿದರು. ಒಂದು ಕಿಲೋ ಗ್ರಾಂ ಸಕ್ಕರೆಯ ಬೆಲೆ 34 ರೂಪಾಯಿಯಾದರೆ ಒಟ್ಟು ಎಷ್ಟು ಹಣ ನೀಡಬೇಕು?

? ಒಂದು ಪ್ಯಾಕೆಟ್ ಸೇಮಿಗೆಯ ಬೆಲೆ 24 ರೂಪಾಯಿಯಾಗಿದೆ. ಹಾಗಾದರೆ 6 ಪ್ಯಾಕೆಟ್ ಸೇಮಿಗೆ ಖರೀದಿಸಲು ಎಷ್ಟು ಹಣ ಕೊಡಬೇಕು?

? ಸಹಪಾಠಿಗಳಿಗೆ ನೀಡಲು 89 ರೂಪಾಯಿ ಬೆಲೆಯಿರುವ 7 ಕೇಕುಗಳನ್ನು ಮನು ಖರೀದಿಸಿದನು. ನೂರು ರೂಪಾಯಿಯ 7 ನೋಟುಗಳನ್ನು ಅಂಗಡಿಯಲ್ಲಿ ನೀಡಿದರೆ ಎಷ್ಟು ಹಣ ಬಾಕಿ ಸಿಗಬಹುದು?

**10 ರಿಂದ ಗುಣಿಸುವಾಗ**

$5 \times 10 = 50$

$8 \times 10 = 80$

$12 \times 10 =$

$14 \times 10 =$

$27 \times 10 =$

100 ರಿಂದ ಗುಣಿಸುವುದಾದರೋ?

## ಸರ್ಕಸ್

■ ಮನು ಮತ್ತು ಸಹಪಾಠಿಗಳು ಸರ್ಕಸ್ ನೋಡಲು ಹೋದರು. 25 ರೂಪಾಯಿಯ 13 ಫಸ್ಟ್ ಕ್ಲಾಸ್ ಟಿಕೇಟ್‌ಗಳನ್ನು ಅವರು ತೆಗೆದರು. ಹಾಗಾದರೆ ಒಟ್ಟು ಎಷ್ಟು ಹಣ ಖರ್ಚಾಯಿತು? [ ]

**ಟಿಕೇಟು ದರ/ಫಸ್ಟ್ ಕ್ಲಾಸ್**
(ಕುರ್ಚಿ)
ಹಿರಿಯರಿಗೆ–45ರೂಪಾಯಿ
ಮಕ್ಕಳಿಗೆ–25 ರೂಪಾಯಿ
(10 ವಯಸ್ಸಿಗಿಂತ ಕೆಳಗಿನವರಿಗೆ)
ಗ್ಯಾಲರಿ (ಬೆಂಚು)
ಹಿರಿಯರಿಗೆ–30 ರೂಪಾಯಿ
ಮಕ್ಕಳಿಗೆ 15 ರೂಪಾಯಿ




**?** ಒಟ್ಟು ಮಾರಿದ 120 ಫಸ್ಟ್‌ಕ್ಲಾಸ್ ಟಿಕೇಟುಗಳಲ್ಲಿ 23 ಟಿಕೇಟುಗಳು ಮಕ್ಕಳದ್ದಾಗಿವೆ. ಹಾಗಾದರೆ ಮಕ್ಕಳಿಗಿರುವ ಟಿಕೇಟಿನಿಂದ ಲಭಿಸಿದ ಆದಾಯವೆಷ್ಟು?

**?** ಹಿರಿಯರಿಗಿರುವ ಟಿಕೇಟಿನಿಂದಲೋ?

**?** ಮಾರಿದ 132 ಗ್ಯಾಲರಿ ಟಿಕೇಟುಗಳಲ್ಲಿ 50 ಮಕ್ಕಳ ಟಿಕೇಟುಗಳು ಮತ್ತು ಬಾಕಿ ಉಳಿದದ್ದು ಹಿರಿಯರ ಟಿಕೇಟುಗಳಾಗಿದ್ದುವು. ಒಟ್ಟು ಎಷ್ಟು ಹಣ ಲಭಿಸಿತು?

**?** ಆ ದಿನದ ಒಟ್ಟು ಆದಾಯವೆಷ್ಟು?

97 ನ್ನು 45 ರಿಂದ ಗುಣಿಸಲು 100 ನ್ನು 45 ರಿಂದ ಗುಣಿಸಿ ಮೂರು 45ಗಳನ್ನು ಕಳೆದರೆ ಸಾಕು



**ಕೆಲವು ಸುಲಭ ದಾರಿಗಳು**

$12 \times 3 = 36$ ಆಗಿದೆ.

$12 \times 30 = 360$

$120 \times 3 =$

$120 \times 30 =$

$12 \times 300 =$

$100 \times 18 = 1800$ ಆಗಿದೆ.

$50 \times 18 =$

$25 \times 18 =$

$200 \times 18 =$

## ಮ್ಯಾಜಿಕ್ ಶೋ

■ ಮ್ಯಾಜಿಕ್ ಶೋ ಹಾಲ್‌ನಲ್ಲಿ 25 ಸಾಲು ಕುರ್ಚಿಗಳಿವೆ. ಪ್ರತಿಯೊಂದು ಸಾಲಿನಲ್ಲಿ 24 ಕುರ್ಚಿಗಳಿವೆ.

? ಹಾಲ್‌ನಲ್ಲಿ ಒಟ್ಟು ಎಷ್ಟು ಕುರ್ಚಿಗಳಿವೆ?

? ಟಿಕೇಟು ದರ 20 ರೂಪಾಯಿಯಾಗಿದೆ. ಎಲ್ಲಾ ಟಿಕೇಟುಗಳನ್ನು ಮಾರಿದರು. ಹಾಗಾದರೆ ಒಂದು ಸಾಲಿನ ಪ್ರೇಕ್ಷಕರಿಂದ ಎಷ್ಟು ಹಣ ಲಭಿಸಬಹುದು? 25 ಸಾಲುಗಳಿಂದಲೋ?

**20ರಿಂದ ಗುಣಿಸೋಣ**

$12 \times 10 = 120$    $12 \times 20 = 240$

$32 \times 10 =$    $32 \times 20 =$

$44 \times 10 =$    $44 \times 20 =$

**$24 \times 20 = ?$**

20ರಿಂದ ಗುಣಿಸಲಿರುವ ಸುಲಭದಾರಿ ಯಾವುದು?

## ತರಗತಿ ಲೈಬ್ರರಿ

■ ಮನುವಿನ ಶಾಲೆಯಲ್ಲಿ ತರಗತಿ ಲೈಬ್ರರಿಗಳಲ್ಲಿ ಉಪಯೋಗಿಸುವುದಕ್ಕಾಗಿ ಪೋಕೆಟ್ ಡಿಕ್ಷನರಿಗಳನ್ನು ಖರೀದಿಸಿದರು. ಮೂರನೇ ತರಗತಿಗೆ 44 ಮತ್ತು ನಾಲ್ಕನೇ ತರಗತಿಗೆ 56 ಡಿಕ್ಷನರಿಗಳನ್ನು ಖರೀದಿಸಿದರು. ಒಂದು ಡಿಕ್ಷನರಿಯ ಬೆಲೆ 25 ರೂಪಾಯಿಯಾಗಿದೆ.

? ಒಟ್ಟು ಎಷ್ಟು ಹಣ ಖರ್ಚಾಯಿತು?

**ಬಾಯಿಲೆಕ್ಕವಾಗಿ ಕಂಡುಹಿಡಿಯಿರಿ**

$(15 \times 98) + (15 \times 2) = 1500$

$(25 \times 92) + (25 \times 8) =$

$(45 \times 88) + (45 \times 12) =$

$(12 \times 998) + (12 + 2) =$

$(26 \times 992) + (26 \times 8) =$

$(125 \times 98) + (125 \times 2) =$

**ನಾನು ಕಂಡುಕೊಂಡ ವಿಧಾನ**






**ಆಲೋಚಿಸುವ ಕಂಡುಹಿಡಿಯುವ**

13ನ್ನು 12ರಿಂದ ಗುಣಿಸಲು 13ನ್ನು 10ರಿಂದ ಗುಣಿಸಿ ಅದರೊಂದಿಗೆ ಎಷ್ಟು ಕೂಡಿಸಬೇಕು?

18ನ್ನು 12ರಿಂದ ಗುಣಿಸಲು 18ನ್ನು 2ರಿಂದ ಗುಣಿಸಿ ಅದರೊಂದಿಗೆ ಎಷ್ಟು ಕೂಡಿಸಬೇಕು?

**ಗುಣಿಸೋಣ**


$24 \times 15 = 240 + 120 = 360$

$36 \times 15 = 360 + 180 = 540$

15ರಿಂದ ಗುಣಿಸಲು 10ರಿಂದ ಗುಣಿಸಿ ಸಿಕ್ಕಿದ ಗುಣಲಬ್ಧಕ್ಕೆ ಅದರ ಅರ್ಧವನ್ನು ಕೂಡಿಸಿದರೆ ಸಾಕು.

$18 \times 15 = ?$    $22 \times 15 = ?$

## ಸ್ವಾತಂತ್ರ್ಯ ದಿನ




ಮುಖ್ಯೋಪಾಧ್ಯಾಯರ ಭಾಷಣವನ್ನು ಗಮನಿಸಿದ್ದೀರಲ್ಲವೇ?

**?** ಮಕ್ಕಳಿಗೆ ನೀಡಿದ ಧ್ವಜವೊಂದಕ್ಕೆ 7 ರೂಪಾಯಿ ಖರ್ಚಾಯಿತು. ಇದಕ್ಕಾಗಿ ಪಿ.ಟಿ.ಎ.ಯವರಿಗೆ ಒಟ್ಟು ಎಷ್ಟು ಹಣ ಖರ್ಚಾಯಿತು?

- ಹೇಗೆ ಕಂಡುಹಿಡಿಯುವಿರಿ?

ಒಂದು ಧ್ವಜಕ್ಕೆ 7 ರೂಪಾಯಿಯಂತೆ 627 ಧ್ವಜಗಳಿಗೆ ಖರ್ಚಾದ ಒಟ್ಟು ಹಣವನ್ನು ಕಂಡುಹಿಡಿಯಲು 627×7 ಎಷ್ಟೆಂದು ಕಂಡುಹಿಡಿಯಬೇಕು.

$$\begin{array}{rcr} 600 \times 7 & = & 4200 \\ 20 \times 7 & = & 140 \\ 7 \times 7 & = & 49 \\ \hline & & \mathbf{4389} \end{array}$$

$$\begin{array}{r} 6\ 2\ 7\ \times \\ 7 \\ \hline 4\ 9 \\ 1\ 4\ 0 \\ 4\ 2\ 0\ 0 \\ \hline 4\ 3\ 8\ 9 \\ \hline\hline \end{array}$$

ಕ್ರಿಯಾರೂಪ

$$\begin{array}{r} {\scriptstyle 1\ 4}\quad \\ 6\ 2\ 7\ \times \\ 7 \\ \hline 4\ 3\ 8\ 9 \\ \hline\hline \end{array}$$

## ಓದುವ ಕೋಣೆ




■ ಒಂದು ಬೆಂಚಿಗೆ 1657ರೂಪಾಯಿ ಮತ್ತು ಒಂದು ಮೇಜಿಗೆ 2395 ರೂಪಾಯಿಯಂತೆ ಖರೀದಿಸಲು ಗುತ್ತಿಗೆ ನೀಡಿದರು. ಇವುಗಳನ್ನು ಖರೀದಿಸಲು ಪಿ.ಟಿ.ಎ.ಯವರಿಗೆ ಎಷ್ಟು ಹಣ ಬೇಕು?

- ಹೇಗೆ ಕಂಡುಹಿಡಿಯುವಿರಿ?
- ಯಾವೆಲ್ಲಾ ಮಾಹಿತಿಗಳನ್ನು ನೀಡಿದ್ದಾರೆ?
    - 
    - 
- ಬೆಂಚುಗಳ ಒಟ್ಟು ಬೆಲೆಯನ್ನು ಕಂಡುಹಿಡಿಯುವ.

1657 ರೂಪಾಯಿ ಬೆಲೆಯಿರುವ 6 ಬೆಂಚುಗಳು

ಅಂದರೆ, $1657 \times 6$

$$\begin{array}{rcrcr} 1000 & \times & 6 & = & 6000 \\ 600 & \times & 6 & = & 3600 \\ 50 & \times & 6 & = & 300 \\ 7 & \times & 6 & = & 42 \\ \hline & & & & 9942 \end{array}$$

$$\begin{array}{r} 1\,6\,5\,7\,\times \\ 6 \\ \hline 4\,2 \\ 3\,0\,0 \\ 3\,6\,0\,0 \\ 6\,0\,0\,0 \\ \hline 9\,9\,4\,2 \\ \hline\hline \end{array}$$

| 1657 → | 1000 | 600 | 50 | 7 | | |
|---|---|---|---|---|---|---|
| 6ರಿಂದ ಗುಣಿಸಿದರೆ | 6000 | 3600 | 300 | 42 | = | 9942 |

ಕ್ರಿಯಾರೂಪ

$$\begin{array}{r} {\color{red}{3\,3\,4}}\phantom{\,7\,\times} \\ 1\,6\,5\,7\,\times \\ 6\phantom{\,\times} \\ \hline 9\,9\,4\,2\phantom{\,\times} \\ \hline\hline \end{array}$$


ಇದರಂತೆ ಮೇಜುಗಳ ಒಟ್ಟು ಬೆಲೆಯನ್ನು ಕಂಡುಹಿಡಿಯಿರಿ. ಇನ್ನು ಎರಡಕ್ಕೂ ಸೇರಿ ಒಟ್ಟು ಎಷ್ಟು ಬೆಲೆಯೆಂದು ಕಂಡುಹಿಡಿಯಬಹುದಲ್ಲವೇ?

**ನಾನು ಕಂಡುಕೊಂಡ ವಿಧಾನ**






## ಕೈಜೋಡಿಸೋಣ




■ 'ಪ್ರಗತಿ' ಯೋಜನೆಗೆ 627 ಮಕ್ಕಳು 8 ರೂಪಾಯಿಯಂತೆ ಸಂಭಾವನೆ ನೀಡಿದರು.

ಹಾಗಾದರೆ ಮಕ್ಕಳಿಂದ ಒಟ್ಟು ಎಷ್ಟು ಹಣ ಲಭಿಸಿತು? [ ]

? ಶಾಲೆಯ 23 ಮಂದಿ ಅಧ್ಯಾಪಕರು 325 ರೂಪಾಯಿಯಂತೆ ಸಂಭಾವನೆ ನೀಡಿದರು. ಹಾಗಾದರೆ ಅಧ್ಯಾಪಕರಿಂದ ಒಟ್ಟು ಎಷ್ಟು ಹಣ ಲಭಿಸಿತು?

- ಹೇಗೆ ಕಂಡುಹಿಡಿಯುವಿರಿ?
-

**325 × 23**

300 × 23
- 300 × 20 = 6000
- 300 × 3 = 900
- → 6900

+

20 × 23
- 20 × 20 = 400
- 20 × 3 = 60
- → 460

+

5 × 23
- 5 × 20 = 100
- 5 × 3 = 15
- → 115

325 × 23 = 7475

| 325 × 23 |
|---|
| 300 × 23 = 6900 |
| 20 × 23 = 460 |
| 5 × 23 = 115 |
| 7475 |

325 × 23 = 325 × 20 + 325 × 3

| 325 × 20 | | 325 × 3 |
|---|---|---|
| 300 × 20 = 6000 | + | 300 × 3 = 900 |
| 20 × 20 = 400 | | 20 × 3 = 60 |
| 5 × 20 = 100 | | 5 × 3 = 15 |
| 6500 | + | 975 |

7475

ಇದನ್ನು ಸಂಕ್ಷಿಪ್ತವಾಗಿ ಹೀಗೆ ಬರೆಯಬಹುದು.

| 325 → | 300 | 20 | 5 |
|---|---|---|---|
| 20ರಿಂದ ಗುಣಿಸಿದಾಗ | 6000 | 400 | 100 |
| 3ರಿಂದ ಗುಣಿಸಿದಾಗ | 900 | 60 | 15 |
| **23ರಿಂದ ಗುಣಿಸಿದಾಗ** | **6900** | **460** | **115** |

= 7475

```
      3   2   5   ×
          2   3
    -------------
      9   7   5
  6   5   0
    -------------
  7   4   7   5
```

ಹತ್ತರ ಸ್ಥಾನದ 2ರಿಂದ 325ನ್ನು ಗುಣಿಸಿ ಹತ್ತರ ಸ್ಥಾನದಿಂದ ಎಡಭಾಗದಲ್ಲಿ ಬರೆಯುವುದು.

ಒಂದರ ಸ್ಥಾನದ 3ರಿಂದ 325ನ್ನು ಗುಣಿಸಿ ಮೊದಲು ಬರೆಯುವುದು.

**ಕ್ರಿಯಾರೂಪ**

```
   325 ×
    23
  -----
   975
  650
  -----
  7475
```

**ಗುಣಿಸಿ ನೋಡಿರಿ ಪಟ್ಟಿ ಪೂರ್ತಿಗೊಳಿಸಿರಿ**

37 × 3 = 111

37 × 6 = 222

37 × 9 = 333

......................

......................

1089 × 1 = 1089

1089 × 2 = 2178

1089 × 3 = 3267

.........................

.........................

.........................

1089 × 9 = .......

## ಶಾಯಿಪೆನ್ನು

- ಮೈ ಇಂಡಿಯಾ ಕ್ಲಬ್ಬಿನವರು ಸ್ವಾತಂತ್ರ್ಯ ದಿನದ ಅಂಗವಾಗಿ ಎಲ್.ಪಿ. ವಿಭಾಗದ 248 ಮಂದಿ ಮಕ್ಕಳಿಗೆ 30 ರೂಪಾಯಿಯ ನೋಟು ಪುಸ್ತಕಗಳನ್ನು ಮತ್ತು 25 ರೂಪಾಯಿಯ ಶಾಯಿಪೆನ್ನುಗಳನ್ನು ನೀಡಿದರು. ಕ್ಲಬ್ಬಿಗೆ ಒಟ್ಟು ಎಷ್ಟು ಹಣ ಖರ್ಚಾಯಿತು?



### ತಿರುಗಿಸಿ ಕೂಡಿಸಿದರೋ?

| | |
|---|---|
| 23 + 54 = 77 | 32 + 45 = 77 |
| 42 + 46 = | 24 + 64 = |
| 67 + 98 = | 76 + 89 = |
| 86 + 35 = | 68 + 53 = |


### ತಿರುಗಿಸಿ ಗುಣಿಸಿದರೋ?

| | |
|---|---|
| 23 × 64 = 1472 | 32 × 46 = 1472 |
| 13 × 93 = | 31 × 39 = |
| 26 × 93 = | 62 × 39 = |
| 42 × 36 = | 24 × 63 = |

ಇಂತಹ ಜೋಡಿಗಳನ್ನು ಕಂಡುಹಿಡಿಯಬಹುದೇ?

## ನಿಘಂಟು

- ಗ್ರಾಮಸೇವಾ ಕ್ಲಬ್ಬಿನವರು ಮನುವಿನ ಶಾಲೆಯ 7ನೇ ತರಗತಿಯ 124 ಮಂದಿ ಮಕ್ಕಳಿಗೆ 125 ರೂಪಾಯಿ ಬೆಲೆಯಿರುವ ನಿಘಂಟನ್ನು ಉಚಿತವಾಗಿ ವಿತರಣೆ ಮಾಡಿದರು. ನಿಘಂಟು ಖರೀದಿಸಲು ಕ್ಲಬ್ಬಿಗೆ ಎಷ್ಟು ಹಣ ಖರ್ಚಾಯಿತು?



**124 × 125**

| 124 × 100 | + | 124 × 20 | + | 124 × 5 |
|---|---|---|---|---|
| 100 × 100 = 10000 | | 100 × 20 = 2000 | | 100 × 5 = 500 |
| 20 × 100 = 2000 | + | 20 × 20 = 400 | + | 20 × 5 = 100 |
| 4 × 100 = 400 | | 4 × 20 = 80 | | 4 × 5 = 20 |
| 12400 | + | 2480 | + | 620 = **15500** |

| 124 → | 100 | 20 | 4 |
|---|---|---|---|
| 100 ರಿಂದ ಗುಣಿಸಿದಾಗ | 10000 | 2000 | 400 |
| 20 ರಿಂದ ಗುಣಿಸಿದಾಗ | 2000 | 400 | 80 |
| 5 ರಿಂದ ಗುಣಿಸಿದಾಗ | 500 | 100 | 20 |
| **125 ರಿಂದ ಗುಣಿಸಿದರೆ** | **12500** | **2500** | **500** |

124 × 125 = 12500 + 2500 + 500 = **15500**

| | | 1 | 2 | 4 × |
|---|---|---|---|---|
| | | 1 | 2 | 5 |
| | | 6 | 2 | 0 |
| | 2 | 4 | 8 | |
| 1 | 2 | 4 | | |
| 1 | 5 | 5 | 0 | 0 |

ಒಂದರ ಸ್ಥಾನದ ಅಂಕೆಯಾದ 5ರಿಂದ 124ನ್ನು ಗುಣಿಸಿ ಮೊದಲು ಬರೆಯುವುದು.

ಹತ್ತರ ಸ್ಥಾನದ ಅಂಕೆಯಾದ 2ರಿಂದ 124ನ್ನು ಗುಣಿಸಿ ಹತ್ತರ ಸ್ಥಾನದಿಂದ ಎಡಭಾಗಕ್ಕೆ ಬರೆಯುವುದು.


ನೂರರ ಸ್ಥಾನದ ಅಂಕೆಯಾದ 1ರಿಂದ 124ನ್ನೂ ಗುಣಿಸಿ ನೂರರ ಸ್ಥಾನದಿಂದ ಎಡಭಾಗಕ್ಕೆ ಬರೆಯುವುದು.

**ಕ್ರಿಯಾರೂಪ** →

```
  124 ×
  125
 -----
  620
 248
124
-----
15500
```

## ಪ್ರೋತ್ಸಾಹ

■ ಸಿಂಹಪುರ ಪಂಚಾಯತಿನ ಶಾಲೆಗಳಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಎಲ್ಲಾ ವಿಷಯಗಳಲ್ಲಿ ಎ ಪ್ಲಸ್ ಗಳಿಸಿದ 36 ಮಂದಿ ವಿದ್ಯಾರ್ಥಿಗಳಿಗೆ 375 ರೂಪಾಯಿಯಂತೆ ಬೆಲೆಯಿರುವ ಇಯರ್‌ಬುಕ್‌ಗಳನ್ನು, ರಾಜ್ಯಮಟ್ಟದ ಕಲೋತ್ಸವದಲ್ಲಿ ಸಮೂಹ ನೃತ್ಯದಲ್ಲಿ ಪ್ರಥಮ ಸ್ಥಾನವನ್ನು ಗಳಿಸಿದ 9 ಮಂದಿ ವಿದ್ಯಾರ್ಥಿಗಳಿಗೆ 325 ರೂಪಾಯಿಯಂತೆ ಬೆಲೆಯಿರುವ ಬ್ಯಾಗ್‌ಗಳನ್ನು ಪಂಚಾಯತಿನವರು ವಿತರಿಸಿದರು. ಕಲಾಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಿದ 102 ಮಂದಿ ಮಕ್ಕಳಿಗೆ 105 ರೂಪಾಯಿಯಂತೆ ಬೆಲೆಯಿರುವ ಟ್ರೋಫಿಗಳನ್ನೂ ವಿವಿಧ ಸ್ಕಾಲರ್‌ಶಿಪ್ ಪರೀಕ್ಷೆಗಳಲ್ಲಿ ಭಾಗವಹಿಸಿದ 100 ಮಂದಿ ಮಕ್ಕಳಿಗೆ 150 ರೂಪಾಯಿಯಂತೆ ಬೆಲೆಯಿರುವ ಪುಸ್ತಕಗಳನ್ನೂ ನೀಡಿದರು.




ಉತ್ತಮ ಚಟುವಟಿಕೆಗಳಿಗಾಗಿ 3 ಶಾಲೆಗಳ ಪಿ.ಟಿ.ಎ.ಗೆ 1501 ರೂಪಾಯಿಯಂತೆ ನಗದು ಬಹುಮಾನಗಳನ್ನೂ ನೀಡಿದರು.

? ಪ್ರತಿಯೊಂದಕ್ಕೂ ಪಂಚಾಯತಿಗೆ ಖರ್ಚಾದ ಹಣವೆಷ್ಟು?

? ಒಟ್ಟು ಎಷ್ಟು ಹಣ ಖರ್ಚಾಯಿತು?

- ಹೇಗೆ ಕಂಡುಹಿಡಿಯುವಿರಿ?
- ಯಾವ ಯಾವ ಮಾಹಿತಿಗಳನ್ನು ನೀಡಿದ್ದಾರೆ?



| ನಾನು ನನ್ನ ಕುರಿತು | ಹೌದು | ಅಲ್ಲ |
|---|---|---|
| ಸಮಸ್ಯೆ ಪರಿಹಾರಕ್ಕೆ ಸೂಕ್ತವಾದ ದಾರಿ ಯಾವುದೆಂದು ಕಂಡುಕೊಂಡೆನು. | | |
| ಪಟ್ಟಿಯಲ್ಲಿ ಯಾವ ಯಾವ ಮಾಹಿತಿಗಳು ಬೇಕು ಎಂಬುದನ್ನು ಖಚಿತಪಡಿಸಿದೆನು. | | |
| ಸರಿಯಾದ ಉತ್ತರಕ್ಕೆ ತಲುಪಲು ಸಾಧ್ಯವಾಯಿತು. | | |
| ಪಟ್ಟಿಯಲ್ಲಿರುವ ಮಾಹಿತಿಗಳನ್ನು ಮತ್ತು ಉತ್ತರಕ್ಕೆ ತಲುಪಿದ ದಾರಿಯನ್ನು ಇತರರಿಗೆ ತಿಳಿಸಿಕೊಡಲು ಸಾಧ್ಯವಾಯಿತು. | | |

### ಗುಣಿಸುವ ಕೂಡಿಸುವ

| | | | | | | | | | | | |
|---|---|---|---|---|---|---|---|---|---|---|---|
| 1 | × | 9 | + | 2 | = | 11 | 21 | × | 9 | = | 189 |
| 12 | × | 9 | + | 3 | = | 111 | 321 | × | 9 | = | 2889 |
| 123 | × | 9 | + | 4 | = | 1111 | 4321 | × | 9 | = | 38889 |
| 1234 | × | 9 | + | 5 | = | 11111 | 54321 | × | 9 | = | 488889 |
| ......... | × | ... | + | ... | = | ......... | ............. | × | 9 | = | ............... |
| ......... | × | ... | + | ... | = | ......... | ............. | × | ... | = | ............... |
| ......... | × | ... | + | ... | = | ......... | ............. | × | ... | = | ............... |
| ......... | × | ... | + | ... | = | ......... | ............. | × | ... | = | ............... |
| ......... | × | ... | + | 10 | = | ......... | ............. | × | ... | = | ............... |

## ಹೆಚ್ಚು ಮತ್ತು ಕಡಿಮೆ

ಗಣಿತ ಫಲಕಕ್ಕಾಗಿ ಮನು ತಯಾರಿಸಿದ ಪಟ್ಟಿಯನ್ನು ನೋಡಿರಿ. ವಿಶೇಷತೆ ಏನು?

- $1 + 3 = 2 \times 2$
- $1 + 3 + 5 = 3 \times 3$
- $1 + 3 + 5 + 7 = 4 \times 4$
- $1 + 3 + 5 + 7 + 9 = 5 \times 5$
- 
- 
- 
- 

ಮುಂದಿನ 4 ಸಾಲುಗಳನ್ನು ಕಂಡುಹಿಡಿದು ಬರೆಯಿರಿ.

1 + 3 + 5 ... + 19 =...

ಎಷ್ಟಾಗಿರಬಹುದು?

- $1 + 3 = 2 \times 2$
- $3 + 5 = 2 \times 4$
- $5 + 7 = 2 \times 6$
- $7 + 9 = 2 \times 8$
- 
- 
- 
- 

ಮುಂದಿನ 4 ಸಾಲುಗಳನ್ನು ಕಂಡುಹಿಡಿದು ಬರೆಯಿರಿ.

17 + 19 ಎಷ್ಟಾಗಿರಬಹುದು?

31 + 33 ಆದರೋ?

- $1 + 2 + 1 = 2 \times 2$
- $1 + 2 + 3 + 2 + 1 = 3 \times 3$
- $1 + 2 + 3 + 4 + 3 + 2 + 1 = 4 \times 4$
- 
- 
- 
- 

ಮುಂದಿನ 4 ಸಾಲುಗಳನ್ನು ಕಂಡುಹಿಡಿದು ಬರೆಯಿರಿ.

ಮಧ್ಯದಲ್ಲಿ ಬರುವ ಸಂಖ್ಯೆ 16 ಆದರೆ ಮೊತ್ತ ಎಷ್ಟು?

**ಬಾಯಿಲೆಕ್ಕವಾಗಿ ಕಂಡುಹಿಡಿಯಿರಿ.**

$2 \times 5 \times 13 =$

$2 \times 25 \times 5 =$

$25 \times 16 \times 4 =$

$13 \times 50 \times 2 =$

**ಹೆಚ್ಚಾಗಿಯೂ ಹೆಚ್ಚಾಗದೆಯೂ**

| | |
|---|---|
| $24 \times 25 = 600$ | $32 \times 50 = 1600$ |
| $24 \times 50 =$ | $16 \times 100 =$ |
| $24 \times ... = 2400$ | $8 \times ... = 1600$ |
| $24 \times ... = 4800$ | $4 \times ... = 1600$ |


## ನಮೂನೆ ಕಂಡುಹಿಡಿಯುವ

- ಈ ಆಯತದಿಂದ ಸಾಧ್ಯವಿದ್ದಷ್ಟು ನಮೂನೆಗಳನ್ನು ಕಂಡುಹಿಡಿಯಿರಿ.

| | | | | | | | | | |
|---|---|---|---|---|---|---|---|---|---|
| | | 3 | | | 6 | | | 9 | |
| | 12 | | | 15 | | | 18 | | |
| 21 | | | 24 | | | 27 | | | 30 |
| | | 33 | | | 36 | | | 39 | |
| | 42 | | | 45 | | | 48 | | |
| 51 | | | 54 | | | 57 | | | 60 |
| | | 63 | | | 66 | | | 69 | |
| | 72 | | | 75 | | | 78 | | |
| 81 | | | 84 | | | 87 | | | 90 |
| | | 93 | | | 96 | | | 99 | |

- ನೀವು ಕಂಡುಹಿಡಿದ ನಮೂನೆಗಳ ಯುಕ್ತಿಯನ್ನು ವಿವರಿಸಿರಿ.

## ಕೂಡಿಸಿ ನೋಡೋಣ



- ಒಟ್ಟು ಎಷ್ಟು ಚಿಕ್ಕ ತ್ರಿಕೋನಗಳಿವೆ?
- ದೊಡ್ಡ ತ್ರಿಕೋನಗಳೋ?
- ಪ್ರತಿಯೊಂದು ದೊಡ್ಡ ತ್ರಿಕೋನದಲ್ಲಿ ಎಷ್ಟು ಸಣ್ಣ ತ್ರಿಕೋನಗಳಿವೆ??
- 6,12,18... 60ರ ವರೆಗಿರುವ ಸಂಖ್ಯೆಗಳನ್ನು ಸಣ್ಣ ತ್ರಿಕೋನಗಳಲ್ಲಿ ಬರೆಯಬೇಕು. ಪ್ರತಿಯೊಂದು ದೊಡ್ಡ ತ್ರಿಕೋನದ ಸಣ್ಣ ತ್ರಿಕೋನಗಳಲ್ಲಿರುವ ಸಂಖ್ಯೆಗಳನ್ನು ಕೂಡಿಸಿದಾಗ 150 ಸಿಗಬೇಕು.

## ತರಬೇತಿ

■ ಜಿಲ್ಲೆಯಲ್ಲಿ ಆಯ್ಕೆಗೊಂಡ 125 ಮಂದಿ ಅಧ್ಯಾಪಕರಿಗಾಗಿ 2 ದಿನಗಳ ಶಿಬಿರ ನಡೆಯುತ್ತಿದೆ. ಇವರಿಗೆ ಮೊದಲ ದಿನದ ಆಹಾರಕ್ಕಾಗಿ 145 ರೂಪಾಯಿಯಂತೆಯೂ ವಸತಿಗಾಗಿ 275 ರೂಪಾಯಿಯಂತೆಯೂ ನಿಗದಿಪಡಿಸಲಾಗಿತ್ತು. ಎರಡನೇ ದಿನದ ಆಹಾರಕ್ಕಾಗಿ 105 ರೂಪಾಯಿಯಂತೆ ಮಂಜೂರು ಮಾಡಲಾಯಿತು.

? ಪ್ರತಿಯೊಂದು ದಿನಕ್ಕೆ ಆಹಾರಕ್ಕಾಗಿ ಮಂಜೂರಾದ ಒಟ್ಟು ಮೊತ್ತ ಎಷ್ಟು?

? ಒಂದು ದಿನದ ವಸತಿಗಾಗಿ ಒಟ್ಟು ಎಷ್ಟು ಹಣ ಬೇಕಾಗಬಹುದು?

ಒಂದು ನಾಲ್ಕಂಕೆ ಸಂಖ್ಯೆಯನ್ನು 9ರಿಂದ ಗುಣಿಸಿರುವುದನ್ನು ನೋಡಿರಿ. ಖಾಲಿ ಬಿಟ್ಟ ಸ್ಥಾನದಲ್ಲಿರುವ ಅಂಕೆಗಳನ್ನು ಕಂಡುಹಿಡಿಯಿರಿ.

| | | | | |
|---|---|---|---|---|
| ☐ | ☐ | ☐ | ☐ | × |
| | | | 9 | |
| ☐ | ☐ | 6 | 1 | |



❓ ಅಕ್ಷರ ಬುಕ್ ಸ್ಟಾಲಿನಲ್ಲಿ ನಿಘಂಟುವಿಗೆ ಪ್ರತ್ಯೇಕ ಬೆಲೆ ಕಡಿತವಿದೆ. 850 ರೂಪಾಯಿ ಬೆಲೆಯಿರುವ ನಿಘಂಟು 600ರೂಪಾಯಿಗೆ ಲಭಿಸುವುದು. 325ರೂಪಾಯಿಯಂತೆ ಎರಡು ಕಂತುಗಳಲ್ಲಿ ನೀಡಿ ಅಥವಾ 240 ರೂಪಾಯಿಯಂತೆ 3 ಕಂತುಗಳಲ್ಲಿ ನೀಡಿ ನಿಘಂಟನ್ನು ಖರೀದಿಸಬಹುದು. 600 ರೂಪಾಯಿಗೆ 29 ಮಂದಿ, ಎರಡು ಕಂತುಗಳಲ್ಲಾಗಿ ಹಣಪಾವತಿಸಿ 32 ಮಂದಿ ಮತ್ತು ಮೂರು ಕಂತುಗಳಲ್ಲಾಗಿ ಹಣ ಪಾವತಿಸಿ 38 ಮಂದಿ ನಿಘಂಟನ್ನು ಖರೀದಿಸಿದರು. ನಿಘಂಟುಗಳನ್ನು ಮಾರಿದಾಗ ಲಭಿಸಿದ ಒಟ್ಟು ಹಣವೆಷ್ಟು? ಎಲ್ಲರೂ 600 ರೂಪಾಯಿಗೆ ಖರೀದಿಸಿದ್ದಾದರೆ ಒಟ್ಟು ಬೆಲೆಯಲ್ಲಾಗುವ ವ್ಯತ್ಯಾಸವೆಷ್ಟು?

❓ ಸುಮವನ ಎಲ್ ಪಿ ಶಾಲೆಯ ನಾಲ್ಕನೇ ತರಗತಿಯ 134 ಮಕ್ಕಳಿಗೆ ಪಿಟಿಎಯವರು 125 ರೂಪಾಯಿಯಂತೆ ಬೆಲೆಯಿರುವ ಗಣಿತ ಕಿಟ್ ವಿತರಿಸಿದರು. ಇದಕ್ಕಾಗಿ ಪಿಟಎಗೆ ಖರ್ಚಾದ ಹಣವೆಷ್ಟು?

❓ ತಿರುವನಂತಪುರದಿಂದ ಕೋಝಿಕ್ಕೋಡಿಗೆ ಹೋಗುವ ಎಕ್ಸ್‌ಪ್ರೆಸ್ ಬಸ್ಸಿನ ಪ್ರಯಾಣ ದರಗಳನ್ನು ಕೆಳಗೆ ಕೊಡಲಾಗಿದೆ.

| | |
|---|---|
| ತಿರುವನಂತಪುರ – ಎರ್ನಾಕುಳಂ | 260 ರೂಪಾಯಿ |
| ತಿರುವನಂತಪುರ – ತ್ರಿಶೂರು | 375 ರೂಪಾಯಿ |
| ತಿರುವನಂತಪುರ – ಕೋಝಿಕ್ಕೋಡು | 475 ರೂಪಾಯಿ |
| ಎರ್ನಾಕುಳಂ – ಕೋಝಿಕ್ಕೋಡು | 227 ರೂಪಾಯಿ |
| ತ್ರಿಶೂರು – ಕೋಝಿಕ್ಕೋಡು | 118 ರೂಪಾಯಿ |


ತಿರುವನಂತಪುರದಿಂದ ಹತ್ತಿದ 48 ಮಂದಿ ಪ್ರಯಾಣಿಕರಲ್ಲಿ 36 ಮಂದಿ ಕೋಝಿಕ್ಕೋಡಿಗೂ ಉಳಿದವರು ಎರ್ನಾಕುಳಮಿಗೂ ಟಿಕೇಟು ತೆಗೆದರು. ಎರ್ನಾಕುಳಂನಿಂದ ಕೋಝಿಕ್ಕೋಡಿಗೆ 8 ಮಂದಿ ಹತ್ತಿದರು. ಬಸ್ಸಿನ ಆ ಪ್ರಯಾಣದಲ್ಲಿ ಲಭಿಸಿದ ಒಟ್ಟು ಆದಾಯವೆಷ್ಟು?

7

# ಸಮಾನವಾದುದು ಮತ್ತು ಬಾಕಿ ಇರುವುದು

## ಸಂತೆ ವ್ಯಾಪಾರ

- ಓಣಂ ರಜೆಯಲ್ಲಿ ರಾಜು, ಅಬು ಹಾಗೂ ಜೋನಿ ಸೇರಿ ಚಪ್ಪರ ಹಾಕಿ ವ್ಯಾಪಾರ ಪ್ರಾರಂಭಿಸಿದರು.






ಒಬ್ಬನಿಗೆ ಎಷ್ಟು ಹಣ ಲಭಿಸಬಹುದು?

3 ಮಂದಿಗೆ ಸಮಾನವಾಗಿ ಹಂಚಬೇಕು.

| | |
|---|---|
| ಮೊದಲು 3 ಮಂದಿ ಒಂದು ರೂಪಾಯಿಯಂತೆ ತೆಗೆದರೆ ಬಾಕಿ | 18 − 3 = 15 |
| ನಂತರ ಅವರು ಒಂದು ರೂಪಾಯಿಯಂತೆ ತೆಗೆದರೆ ಬಾಕಿ | 15 − 3 = 12 |
| ಪುನಃ ಒಂದು ರೂಪಾಯಿಯಂತೆ ತೆಗೆದರೆ ಬಾಕಿ | 12 − 3 = 9 |
| ಈ ರೀತಿ ಮುಂದುವರಿದರೆ | 9 − 3 = 6 |
| | 6 − 3 = 3 |
| | 3 − 3 = 0 |

ಪ್ರತಿಯೊಬ್ಬರು ಎಷ್ಟು ಸಲ 1 ರೂಪಾಯಿ ತೆಗೆದರು? ▭

ಒಬ್ಬರಿಗೆ ಒಟ್ಟು ಸಿಕ್ಕಿದ ಹಣ ▭ ರೂಪಾಯಿ

ಇದನ್ನು ಇನ್ನೊಮ್ಮೆ ವಿವರಿಸುವ.

| ರೂಪಾಯಿ / ಹೆಸರು | 18 | 15 | 12 | 9 | 6 | 3 | ಪ್ರತಿಯೊಬ್ಬರಿಗೆ ಲಭಿಸಿರುವುದು |
|---|---|---|---|---|---|---|---|
| ರಾಜು | | | | | | | |
| ಅಬು | | | | | | | |
| ಜೋನಿ | | | | | | | |
| ಪ್ರತಿಯೊಂದು ಸಲ ಬಾಕಿ | 18 − 3 = 15 | 15 − 3 = 12 | 12 − 3 = 9 | 9 − 3 = 6 | 6 − 3 = 3 | 3 − 3 = 0 | |

18 ರೂಪಾಯಿಯನ್ನು 3 ಮಂದಿಗೆ ಸಮಾನವಾಗಿ ಹಂಚಿದಾಗ ಒಬ್ಬರಿಗೆ ಲಭಿಸಿರುವುದು ▭ ರೂಪಾಯಿ.

ಅಂದರೆ, $18 \div 3 = \square$

**ಕ್ರಿಯಾರೂಪ**

$$\begin{array}{r} 6 \\ 3\,\overline{)18} \\ 18 \\ \hline 0 \end{array}$$



ಎರಡನೇ ದಿವಸ 21 ರೂಪಾಯಿ ಲಾಭ ಬಂತು.

ಇದನ್ನು ಸಮಾನವಾಗಿ ಹಂಚಿದರೆ ಪ್ರತಿಯೊಬ್ಬರಿಗೆ ಲಭಿಸುವ ಹಣವನ್ನು ಹೇಗೆ ಕಂಡುಹಿಡಿಯಬಹುದು?

21 − 3 = 18
18 − 3 = 15
.........................
.........................
.........................

21 ರಿಂದ ಎಷ್ಟು ಸಲ 3 ನ್ನು ತೆಗೆಯಬಹುದು?

ಈ ರೀತಿ ಮುಂದುವರಿದರೆ ಒಬ್ಬರಿಗೆ ಸಿಗುವ ಹಣ ಎಷ್ಟಾಗಿರಬಹುದು? ☐

ಇದನ್ನು $21 \div 3 =$ ☐ ಎಂದು ಬರೆಯಬಹುದು.

**ಕ್ರಿಯಾರೂಪ**

$$\begin{array}{r} 7 \\ 3\overline{)21} \\ 21 \\ \hline 0 \end{array}$$

ಮೂರನೇ ದಿವಸ 27 ರೂಪಾಯಿ ಲಾಭ ಬಂತು.

ಇದನ್ನು ಸಮಾನವಾಗಿ ಹಂಚಿದರೆ ಒಬ್ಬರಿಗೆ ಲಭಿಸುವ ಹಣ

☐ ÷ ☐ = ☐

$$3\overline{)27}$$

## ಕಲೋತ್ಸವ

ರಾಜು ಅಬು ಹಾಗೂ ಜೋನಿ ಓಣಂ ರಜೆ ಕಳೆದು ಶಾಲೆಗೆ ಬಂದರು.

*ನಂದಾಪುರ ಎಲ್.ಪಿ. ಶಾಲೆ*




**ನೋಟಿಸ್ ಬೋರ್ಡ್**

**ಪ್ರಕಟಣೆ**

ಈ ವರ್ಷದ ಶಾಲಾ ಕಲೋತ್ಸವವು ನವೆಂಬರ್ ಕೊನೆಯ ವಾರ ನಡೆಯಲಿರುವುದು. ಇದರ ಅಂಗವಾಗಿ ಪ್ರತಿಯೊಂದು ತರಗತಿಯ ಮಕ್ಕಳನ್ನು ರಾಗ, ತಾಳ, ಲಯ, ಶ್ರುತಿ ಎಂಬೀ ಹೌಸ್‌ಗಳಾಗಿ ಮಾಡಿ ಸ್ಪರ್ಧೆಗಳನ್ನು ನಡೆಸಲಾಗುವುದು.

ಸಹಿ/–

ನಂದಾಪುರ **ಹೆಡ್ ಮಾಸ್ಟರ್**

ಕಲೋತ್ಸವದ ಕುರಿತಾದ ನೋಟಿಸನ್ನು ಗಮನಿಸಿದ್ದೀರಲ್ಲವೇ?

ಮಕ್ಕಳ ಸಂಖ್ಯೆಯನ್ನು ಸೂಚಿಸುವ ಪಟ್ಟಿಯನ್ನು ನೋಡಿದ್ದೀರಲ್ಲವೇ? ಪ್ರತಿಯೊಂದು ತರಗತಿಯ ಮಕ್ಕಳನ್ನು ನಾಲ್ಕು ಹೌಸ್‌ಗಳಿಗೆ ಸಮಾನವಾಗಿ ಸೇರಿಸಬೇಕು. ಪ್ರತಿಯೊಂದು ತರಗತಿಯಿಂದ ಎಷ್ಟು ಮಂದಿಯಂತೆ ಪ್ರತಿಯೊಂದು ಹೌಸ್‌ಗೆ ಸೇರಿಸಬೇಕು?

| ತರಗತಿ | ಮಕ್ಕಳ ಸಂಖ್ಯೆ |
|---|---|
| I | 24 |
| II | 32 |
| III | 36 |
| IV | 28 |

ಒಂದನೇ ತರಗತಿಯ 24 ಮಕ್ಕಳನ್ನು 4 ಹೌಸ್‌ಗಳಿಗೆ ಸೇರಿಸಿದರೋ?

4 ಮಕ್ಕಳನ್ನೂ ಹೌಸುಗಳಿಗೆ ಸೇರಿಸುವಾಗ ಬಾಕಿಯಾಗುವವರು $24 - 4 = 20$

ನಂತರದ 4 ಮಕ್ಕಳನ್ನು ಹೌಸ್‌ಗಳಿಗೆ ಸೇರಿಸುವಾಗ ಬಾಕಿಯಾಗುವವರು $20 - 4 = 16$

ಈ ರೀತಿ ಮುಂದುವರಿಸಿದಾಗ ಪ್ರತಿಯೊಂದು ಸಲವೂ ಬಾಕಿಯಾಗುವವರು

$16 - 4 = 12$

$12 - 4 = 8$

$8 - 4 = 4$


$4 - 4 = 0$

ಈಗ ಪ್ರತಿಯೊಂದು ಹೌಸಿನಲ್ಲೂ ಇರುವ ಮಕ್ಕಳ ಸಂಖ್ಯೆ

ಅಂದರೆ $24 \div 4 =$ ☐

**ಕ್ರಿಯಾರೂಪ**

$$4\overline{)24}\quad 6$$
$$\underline{24}$$
$$0$$




- ಇದೇ ರೀತಿ ಎರಡನೇ ತರಗತಿಯ 32 ಮಕ್ಕಳನ್ನು 4 ಹೌಸ್‌ಗಳಿಗೆ ಸೇರಿಸಿದರೆ ಪ್ರತಿಯೊಂದು ಹೌಸಿನಲ್ಲಿರುವ ಮಕ್ಕಳ ಸಂಖ್ಯೆ $32 \div 4 =$ ☐

$$4\overline{)32}$$

- ಮೂರನೇ ತರಗತಿಯ ಮಕ್ಕಳನ್ನು ಹೌಸ್‌ಗಳಿಗೆ ಸೇರಿಸಿದರೆ ☐ ÷ ☐ = ☐

$$4\overline{)36}$$

- ನಾಲ್ಕನೇ ತರಗತಿಯ ಮಕ್ಕಳನ್ನು ಹೌಸ್‌ಗಳಿಗೆ ಸೇರಿಸಿದರೆ ☐ ÷ ☐ = ☐

$$4\overline{)28}$$

## ತಿರುವಾದಿರ ಸ್ಪರ್ಧೆ






■ ತಿರುವಾದಿರಕ್ಕಳಿ ಸ್ಪರ್ಧೆಗಾಗಿ ಮಕ್ಕಳು 48 ರೂಪಾಯಿಗಳ ಬಳೆಗಳನ್ನು ಖರೀದಿಸಿದರು. ಸ್ಪರ್ಧೆಯಲ್ಲಿ ಭಾಗವಹಿಸುವ 8 ಮಕ್ಕಳು ಬಳೆಗಳ ಬೆಲೆಯನ್ನು ಸಮಾನವಾಗಿ ಹಂಚಿಕೊಂಡರೆ ಒಬ್ಬರಿಗೆ ಎಷ್ಟು ರೂಪಾಯಿ ಖರ್ಚಾದಿತು?

ಒಂದು ಮಗುವಿಗೆ ಖರ್ಚಾಗುವ ಹಣ 48 ÷ ☐ = ☐

## ಸಮೂಹ ನೃತ್ಯ




■ ಸುಹರ ಮತ್ತು ಗೆಳತಿಯರು ಸಮೂಹ ನೃತ್ಯ ಪ್ರದರ್ಶನಕ್ಕಾಗಿ ಬಳೆಗಳನ್ನು ಖರೀದಿಸಿದರು. 10 ಬಳೆಗಳಂತೆ ಇರುವ 4 ಪ್ಯಾಕೆಟ್‌ಗಳು ಮತ್ತು 8 ಬಳೆಗಳು ಲಭಿಸಿದುವು. 4 ಮಂದಿಗೆ ಈ ಬಳೆಗಳನ್ನು ಸಮಾನವಾಗಿ ಹಂಚಬೇಕು. ಒಂದು ಮಗುವಿಗೆ ಎಷ್ಟು ಬಳೆಗಳು ಲಭಿಸಬಹುದು?

- ಹೇಗೆ ಕಂಡುಹಿಡಿಯಬಹುದು?
- 4 ಪ್ಯಾಕೆಟ್‌ಗಳನ್ನು ಸಮಾನವಾಗಿ 4 ಮಂದಿ ತೆಗೆದರೆ ಒಂದು ಮಗುವಿಗೆ ಲಭಿಸುವ ಬಳೆಗಳ ಸಂಖ್ಯೆ ☐
- 8 ಬಳೆಗಳನ್ನು 4 ಮಂದಿ ಸಮಾನವಾಗಿ ತೆಗೆದುಕೊಂಡರೆ ಒಂದು ಮಗುವಿಗೆ ಲಭಿಸುವ ಬಳೆಗಳ ಸಂಖ್ಯೆ ☐

**ಏನು ಸಂಬಂಧ?**

$100 \times 15 = 1500$ ಅಲ್ಲವೇ?

| | |
|---|---|
| $50 \times 15 =$ .......... | $50 \times 30 =$ .......... |
| $25 \times 15 =$ .......... | $25 \times 30 =$ .......... |
| $75 \times 15 =$ .......... | $75 \times 30 =$ .......... |

ಒಂದು ಮಗುವಿಗೆ ಸಿಗುವ ಒಟ್ಟು ಬಳೆಗಳ ಸಂಖ್ಯೆ ....... + ....... = .......

ಇಲ್ಲಿ 48 ಬಳೆಗಳನ್ನು 4 ಮಕ್ಕಳಿಗೆ ಸಮಾನವಾಗಿ ಹಂಚಿದಾಗ ಒಂದು ಮಗುವಿಗೆ ಲಭಿಸುವ ಬಳೆಗಳ ಸಂಖ್ಯೆ 48 ÷ 4 = 12

4 ⟌ 48 = 

10 + 2
4 ⟌ 40 + 8
40
0 + 8
8
0
=

ಕ್ರಿಯಾರೂಪ

12
4 ⟌ 48
40
8
8
0

■ 10 ಬಳೆಗಳ 5 ಪ್ಯಾಕೆಟ್ ಮತ್ತು 2 ಬಳೆಗಳು ಇರುವುದಾದರೆ 4 ಮಂದಿಗೆ ಹೇಗೆ ಸಮಾನವಾಗಿ ಹಂಚಬಹುದು?

ಪ್ರತಿಯೊಂದು ಮಗುವಿಗೆ ಒಂದು ಪ್ಯಾಕೆಟ್‌ನಂತೆ ನೀಡಿದರೆ ಒಂದು ಮಗುವಿಗೆ ಲಭಿಸುವ ಬಳೆಗಳ ಸಂಖ್ಯೆ ☐

ಇನ್ನು 10ರ ಒಂದು ಪ್ಯಾಕೆಟ್ ಹಾಗೂ 2 ಬಳೆಗಳು ಬಾಕಿಯಿರುವುದಲ್ಲವೇ?

ಹಾಗಾದರೆ ಬಾಕಿಯಿರುವ ಬಳೆಗಳ ಒಟ್ಟು ಸಂಖ್ಯೆ ☐

ಇದನ್ನು 4 ಮಂದಿಗೆ ಸಮಾನವಾಗಿ ಹಂಚಿದರೆ ಒಬ್ಬರಿಗೆ ಸಿಗುವ ಬಳೆಗಳ ಸಂಖ್ಯೆ ☐

ಈಗ ಒಂದು ಮಗುವಿಗೆ ಸಿಗುವ ಒಟ್ಟು ಬಳೆಗಳ ಸಂಖ್ಯೆ ............. + ............. = ........

ಈ ಕ್ರಿಯೆಯನ್ನು ಹೀಗೆ ಬರೆಯಬಹುದು.

| | 10ರ ಪ್ಯಾಕೆಟ್ | ಒಂದುಗಳು |
|---|---|---|
| ಮಕ್ಕಳ ಸಂಖ್ಯೆ 4 | 5 | 2 |
| 4 ಮಂದಿ ಒಂದು ಪ್ಯಾಕೆಟ್‌ನಂತೆ ತೆಗೆದರೆ 4 × 1 = | 4 | |
| ಬಾಕಿ → | 1 | 2 |
| ಒಂದು 10ರ ಪ್ಯಾಕೆಟ್ ಬಳೆಗಳು ಮತ್ತು 2 ಬಳೆಗಳು ಸೇರಿಸಿದರೆ | | 12 |
| ಇದನ್ನು 4 ಮಂದಿ ಸಮನವಾಗಿ ತೆಗೆದುಕೊಂಡರೆ 4 × 3 = | | 12 |
| | ಬಾಕಿ → | 0 |

$$\begin{array}{r|l} & 10 + 3 \\ 4 & 40 + 12 \\ & 40 \\ \hline & 0 + 12 \\ & 12 \\ \hline & 0 \end{array}$$

ಕ್ರಿಯಾರೂಪ

$$\begin{array}{r|l} & 13 \\ 4 & 52 \\ & 4 \\ \hline & 12 \\ & 12 \\ \hline & 0 \end{array}$$

? 72 ನೆಲ್ಲಿಕಾಯಿಗಳನ್ನು 6 ಮಂದಿಗೆ ಸಮಾನವಾಗಿ ಹಂಚಿದರೆ ಪ್ರತಿಯೊಬ್ಬರಿಗೆ ಸಿಗುವ ನೆಲ್ಲಿಕಾಯಿಗಳೆಷ್ಟು?

? 75 ಲೀಟರ್ ಹಾಲನ್ನು 5 ಲೀಟರ್‌ನಂತೆ ತುಂಬಿಸಲು ಎಷ್ಟು ಪಾತ್ರೆಗಳು ಬೇಕಾಗುವುದು?

**ಇಮ್ಮಡಿ**

| | |
|---|---|
| 24 ÷ 3 = 8 | 24 ÷ 6 = |
| 48 ÷ 3 = | 12 ÷ 6 = |
| 48 ÷ 6 = | 12 ÷ 12 = |

## ಚೋಕ್ ನಿರ್ಮಾಣ

■ ನಾಲ್ಕನೇ ತರಗತಿಯ ಮಕ್ಕಳು ವೃತ್ತಿಪರಿಚಯ ಮೇಳದ ಅಂಗವಾಗಿ 484 ಚೋಕುಗಳನ್ನು ತಯಾರಿಸಿದರು. 100ರ 4 ಪ್ಯಾಕೆಟ್‌ಗಳು, 10ರ 8 ಪ್ಯಾಕೆಟ್‌ಗಳು, ಪ್ಯಾಕೆಟ್ ಇಲ್ಲದ 4 ಚೋಕುಗಳು ಇದ್ದುವು. ಇವುಗಳನ್ನು 4 ತರಗತಿಗಳಿಗೆ ಸಮಾನವಾಗಿ ಹಂಚಿದರೆ ಪ್ರತಿಯೊಂದು ತರಗತಿಗೆ ಎಷ್ಟು ಚೋಕುಗಳು ಲಭಿಸಬಹುದು?



ಹೇಗೆ ಹಂಚಬಹುದು?

- ಮೊದಲು 100ರ ಪ್ಯಾಕೆಟ್‌ಗಳನ್ನು ಹಂಚಿದರೆ
  ಪ್ರತಿಯೊಂದು ತರಗತಿಗೆ ಸಿಗುವ 100ರ ಪ್ಯಾಕೆಟ್‌ಗಳ ಸಂಖ್ಯೆ [1]
  10 ರ ಪ್ಯಾಕೆಟ್‌ಗಳನ್ನು ಹಂಚುವಾಗ ಪ್ರತಿಯೊಂದು ತರಗತಿಗೆ ಸಿಗುವ ಪ್ಯಾಕೆಟ್‌ಗಳ ಸಂಖ್ಯೆ [2]
- ಪ್ಯಾಕೆಟ್‌ನಲ್ಲಿಲ್ಲದ 4 ಚೋಕುಗಳಿವೆಯಲ್ಲವೇ?
  ಅವುಗಳನ್ನು ಹಂಚಿದರೋ [ ]
  ಪ್ರತಿಯೊಂದು ತರಗತಿಗೆ ಸಿಗುವ ಚೋಕುಗಳ ಸಂಖ್ಯೆ [ ]

**ಭಾಗಿಸದೆ ಕಂಡುಹಿಡಿಯುವ**

72 ÷ 4 = 18
76 ÷ 4 =
68 ÷ 4 =
64 ÷ 4 =
80 ÷ 4 =

ಒಂದು ತರಗತಿಗೆ ಸಿಗುವ ಒಟ್ಟು ಚೋಕುಗಳು 100ರ 1 ಪ್ಯಾಕೆಟ್

10ರ 2 ಪ್ಯಾಕೆಟ್

1 ಚೋಕ್

ಅಂದರೆ $100 + 20 + 1 = \square$

ಹಂಚಬೇಕಾದ ಒಟ್ಟು ಚೋಕುಗಳು 484 ಅಲ್ಲವೇ?

ಪ್ರತಿಯೊಂದು ತರಗತಿಗೆ ಸಿಕ್ಕಿದ ಚೋಕುಗಳ ಸಂಖ್ಯೆ

| | 100ರ ಪ್ಯಾಕೆಟ್‌ಗಳ ಸಂಖ್ಯೆ | 10ರ ಪ್ಯಾಕೆಟ್‌ಗಳ ಸಂಖ್ಯೆ | ಪ್ಯಾಕೆಟ್‌ನಲ್ಲಿಲ್ಲದ ಚೋಕುಗಳ ಸಂಖ್ಯೆ | ಒಟ್ಟು |
|---|---|---|---|---|
| | **4** | **8** | **4** | **484** |
| 4 ತರಗತಿಗಳಿಗೆ ಸಮಾನವಾಗಿ ಹಂಚಿದರೆ ಒಂದು ತರಗತಿಗೆ ಸಿಗುವುದು. | **1** | **2** | **1** | **121** |

100 + 20 + 1
4 | 400 + 80 + 4
400 +
0 + 80
80
0 + 4
4
0

121
4 | 484
400
84
80
4
4
0

ಕ್ರಿಯಾರೂಪ

121
4 | 484
4
08
8
04
4
0

ಇಲ್ಲಿ 484ನ್ನು ಭಾಜ್ಯ ಎಂದೂ 4ನ್ನು ಭಾಜಕ ಎಂದೂ 121ನ್ನು ಭಾಗಲಬ್ಧವೆಂದೂ ಕರೆಯುತ್ತಾರೆ.

? ರೀಜ ಮತ್ತು ನಾಲ್ಕು ಗೆಳತಿಯರು ಮಾಲೆ ನಿರ್ಮಿಸಲು ಮುತ್ತುಗಳನ್ನು ಖರೀದಿಸಿದರು. 100 ಮುತ್ತುಗಳಂತೆಯೂ, 10 ಮುತ್ತುಗಳಂತೆಯೂ ಇರುವ ಪ್ಯಾಕೆಟ್‌ಗಳಲ್ಲಿ ಮುತ್ತುಗಳಿವೆ. 100ರ ಪ್ಯಾಕೆಟ್‌ಗಳನ್ನೂ 10ರ ಪ್ಯಾಕೆಟ್‌ಗಳನ್ನೂ 6ರಂತೆ ಅವರು ಖರೀದಿಸಿದರು. ಇವುಗಳನ್ನು 5 ಮಂದಿಗೆ ಸಮಾನವಾಗಿ ಹೇಗೆ ಹಂಚುವರು?

5 ಮಂದಿಗೆ ಮೊದಲು 100ರ 6 ಪ್ಯಾಕೆಟ್‌ಗಳನ್ನು ಹಂಚಿದರೆ

ಒಂದು ಮಗುವಿಗೆ ಸಿಗುವ ನೂರರ ಪ್ಯಾಕೆಟ್‌ಗಳ ಸಂಖ್ಯೆ $\square$

ಬಾಕಿ ಇರುವ ನೂರರ ಪ್ಯಾಕೆಟ್‌ಗಳ ಸಂಖ್ಯೆ $\square$

ಈ 100ರ ಪ್ಯಾಕೇಟನ್ನು 10ರ 10ಪ್ಯಾಕೆಟ್‌ಗಳಾಗಿ ಮಾಡಬಹುದಲ್ಲವೇ?

ಈಗ 10ರ ಪ್ಯಾಕೆಟ್‌ಗಳ ಒಟ್ಟು ಸಂಖ್ಯೆ 10 + 6 = ☐

5 ಮಂದಿಗೆ 16 ಪ್ಯಾಕೆಟ್‌ಗಳನ್ನು ಹಂಚಿದರೆ

ಒಂದು ಮಗುವಿಗೆ ಲಭಿಸುವುದು ☐ ಪ್ಯಾಕೆಟ್

ಬಾಕಿ ಇರುವ 10ರ ಪ್ಯಾಕೆಟ್ ☐

5 ಮಂದಿಗೆ ಬಾಕಿ ಇರುವ ಪ್ಯಾಕೆಟ್‌ನ 10 ಮುತ್ತುಗಳನ್ನು ಸಮಾನವಾಗಿ ಹಂಚಿದರೆ ಒಂದು ಮಗುವಿಗೆ ಸಿಗುವ ಮುತ್ತುಗಳ ಸಂಖ್ಯೆ ☐

ಒಂದು ಮಗುವಿಗೆ ಒಟ್ಟು ಸಿಗುವುದು 100ರ ಒಂದು ಪ್ಯಾಕೆಟ್ 10ರ ಮೂರು ಪ್ಯಾಕೆಟ್ ಮತ್ತು 2 ಮುತ್ತುಗಳಲ್ಲವೇ?

ಅಂದರೆ 100 + 30 + 2 = ☐

660 ÷ 5 = ☐

☐

```
      00  + 30 + 2
5 | 600 + 60
    500
    100 + 60 = 160
               150
                10
                10
```

```
     132
5 | 660
    500
    160
    150
     10
     10
      0
```

ಕ್ರಿಯಾ ರೂಪ

```
     132
5 | 660
    5
    16
    15
     10
     10
      0
```

**?** ವಾಣಿಪುರ ಎಲ್.ಪಿ.ಶಾಲೆಯಲ್ಲಿ ಮಧ್ಯಾಹ್ನದೂಟ ಕಾರ್ಯಕ್ರಮಕ್ಕಾಗಿ ಒಂದು ದಿವಸ 6 ಕಿಲೋಗ್ರಾಂ ಪಚ್ಚೆಹೆಸರು ಉಪಯೋಗಿಸುತ್ತಾರೆ. 135 ಕಿಲೋಗ್ರಾಂ ಪಚ್ಚೆಹೆಸರು ಕಳೆದ ದಿವಸ ಶಾಲೆಗೆ ತರಲಾಯಿತು. ಇದು ಎಷ್ಟು ದಿನಕ್ಕೆ ಸಾಕಾಗಬಹುದು?

- ಇಲ್ಲಿ 135ನ್ನು 6 ರಿಂದ ಭಾಗಿಸುವಿರಲ್ಲವೇ?

  ಭಾಗಿಸಿ ನೋಡಿರಿ.

  ಪಚ್ಚೆಹೆಸರು 22 ದಿವಸ ಉಪಯೋಗಿಸಬಹುದಲ್ಲವೇ?

  ಎಷ್ಟು ಕಿಲೋಗ್ರಾಂ ಪಚ್ಚೆಹೆಸರು ಬಾಕಿಯಾಗಬಹುದು?

  ☐ ಕಿಲೋಗ್ರಾಂ.

```
     22
6 | 135
    12
     15
     12
      3
```



■ 624 ನ್ನು ಹೇಗೆ 6 ಸಮಾನ ಭಾಗಗಳಾಗಿ ಮಾಡಬಹುದು?

600 + 20 + 4 = 624

600ನ್ನು 6 ಸಮಾನ ಗುಂಪುಗಳಾಗಿ ಹಂಚಿದರೆ ಒಬ್ಬರಿಗೆ ಎಷ್ಟು ಸಿಗಬಹುದು?

100 ಅಂದರೆ 600 ÷ 6 = 100

ಇನ್ನು ಬಾಕಿ ಎಷ್ಟು? 24

24 ನ್ನು 6 ಸಮಾನ ಭಾಗಗಳಾಗಿ ಮಾಡಿದಾಗ 24 ÷ 6 = 4

ಆಗ 624 ÷ 6 = 600 ÷ 6 + 24 ÷ 6 = 104

```
     100  +  4
6 | 600  + 24
    600
   ------------
            24
            24
          -----
             0
```

ಕ್ರಿಯಾ ರೂಪ

```
     104
6 | 624
    6
   -----
     24
     24
   -----
      0
```

ಭಾಜಕ ಮತ್ತು ಭಾಗಲಬ್ಧಗಳನ್ನು ಗುಣಿಸಿ ಶೇಷವನ್ನು ಕೂಡಿಸಿದಾಗ ಭಾಜ್ಯ ಸಿಗುವುದಲ್ಲವೇ?



■ 480ನ್ನು 4 ರಿಂದ ಭಾಗಿಸಬೇಕು.

ಅದಕ್ಕೆ 400ನ್ನು 4 ರಿಂದ ಭಾಗಿಸಿಯೂ 80ನ್ನು 4ರಿಂದ ಭಾಗಿಸಿಯೂ ಕೂಡಿಸಿದರೆ ಸಾಲದೇ?

```
     100  + 20
4 | 400  + 80
    400
   ------------
      0  + 80
           80
          ----
            0
```

400ನ್ನು 4 ರಿಂದ ಭಾಗಿಸಿದಾಗ ☐

80ನ್ನು 4 ರಿಂದ ಭಾಗಿಸಿದಾಗ ☐

480ನ್ನು 4 ರಿಂದ ಭಾಗಿಸಿದಾಗ ☐ + ☐ = ☐

ಕ್ರಿಯಾ ರೂಪ

```
     120
4 | 480
    4
   -----
    08
     8
   -----
    00
```

**ತಿರುಗಿಸಿ ಹೇಳಿದಾಗ**

56 ÷ 7 = 8    8 × 7 = 56

72 ÷ 8 = .....    .................

.................    .................

36 ÷ 5 ಕಂಡುಹಿಡಿದರೆ ಭಾಗಲಬ್ಧ 7 ಮತ್ತು ಶೇಷ 1

ಇದನ್ನು ಹೇಗೆ ತಿರುಗಿ ಹೇಳಬಹುದು?

7 × 5 = 35

ಶೇಷ 1 ನ್ನು ಸೇರಿಸಿದರೆ 36 ಆಯಿತು.

ಅಂದರೆ (7 × 5) + 1 = 36

45 ÷ 6 ಕಂಡುಹಿಡಿದರೆ ಭಾಗಲಬ್ಧ 7 ಮತ್ತು ಶೇಷ 3 ಅಲ್ಲವೇ?

ಇದನ್ನು (7 × 6) + 3 = 45 ಎಂದು ಬರೆಯಬಹುದು.

(16 × 7) + 4 = 116 ಆದರೆ

116ನ್ನು 7 ರಿಂದ ಭಾಗಿಸಿದಾಗ ಸಿಗುವ ಶೇಷ ಎಷ್ಟು?

## ಅಂಕೆಗಳ ಮೊತ್ತ ಮತ್ತು ಶೇಷ

ಒಂದು ಸಂಖ್ಯೆಯನ್ನು 9 ರಿಂದ ಭಾಗಿಸಿದಾಗ ಶೇಷ ಎಷ್ಟೆಂದು ಹೇಳಬಹುದೇ? ಪಟ್ಟಿಯನ್ನು ಪೂರ್ತಿಗೊಳಿಸಿರಿ.

9ರಿಂದ ಭಾಗಿಸಿದಾಗ

| ಸಂಖ್ಯೆ | ಭಾಗಲಬ್ಧ | ಶೇಷ | ಅಂಕೆಗಳ ಮೊತ್ತ |
|---|---|---|---|
| 34 | 3 | 7 | $3 + 4 = 7$ |
| 42 | 4 | 6 | $4 + 2 = 6$ |
| 128 | 14 | 2 | $1 + 2 + 8 = 11$<br>$1 + 1 = 2$ |
| 57 | | | |
| 245 | | | |
| 184 | | | |

**ನಾನು ಕಂಡುಹಿಡಿದಿರುವುದು**



**?** 3 ರಿಂದ ಭಾಗಿಸುವಾಗ ಶೇಷ ಇಲ್ಲದ ಅತಿ ಚಿಕ್ಕ ಮೂರಂಕೆ ಸಂಖ್ಯೆ ಯಾವುದು?

**?** ಹಾಲು ಸೊಸೈಟಿಯಲ್ಲಿ ದಿನಕ್ಕೆ 232 ಲೀಟರ್ ಹಾಲು ಸಂಗ್ರಹಿಸುತ್ತಾರೆ. ಇದನ್ನು 5 ಲೀಟರಿನ ಪಾತ್ರೆಗಳಲ್ಲಿ ತುಂಬಿಸಿಡುವುದಾದರೆ ಎಷ್ಟು ಪಾತ್ರೆಗಳು ಬೇಕು? ಬಾಕಿ ಇರುವುದರೊಂದಿಗೆ ಎಷ್ಟು ಲೀಟರ್ ಸೇರಿಸಿದರೆ ಇನ್ನೊಂದು ಪಾತ್ರೆ ತುಂಬಿಸಬಹುದು?

**ವಿಶೇಷತೆಯೇನು?**

$7 \times 1 = 7$ — $7 \div 1 = 7$

$7 \div 7 = 1$

$10 \times 1 = 10$ — $10 \div 1 = 10$

$10 \div 10 = 1$

$240 \times 1 = 240$ — $240 \div 1 = 240$

$240 \div 240 = \square$

ಇದರ ಹಾಗೆ ಬೇರೆ ಕೆಲವು ಸಂಖ್ಯೆಗಳನ್ನು ತೆಗೆದು ಮಾಡಿ ನೋಡಿರಿ. ಒಂದು ಸಂಖ್ಯೆಯನ್ನು ಅದೇ ಸಂಖ್ಯೆಯಿಂದ ಭಾಗಿಸಿದರೆ ಸಿಗುವ ಭಾಗಲಬ್ಧದ ಪ್ರತ್ಯೇಕತೆಯೇನು? ಸಂಖ್ಯೆಯನ್ನು ಒಂದರಿಂದ ಭಾಗಿಸಿದರೋ?

? 10 ಮತ್ತು 20ರ ಮಧ್ಯದಲ್ಲಿ 6ರಿಂದ ಭಾಗಿಸಿದಾಗ ಶೇಷ ಬಾರದ ಸಂಖ್ಯೆಗಳು ಯಾವುವು?

? ರಾಮುವಿನ ಕೈಯಲ್ಲಿ ಒಂದಿಷ್ಟು ಮಿಠಾಯಿಗಳಿವೆ. ಅವುಗಳನ್ನು 6 ಮಂದಿ ಗೆಳೆಯರಿಗೆ ಸಮಾನವಾಗಿ ಹಂಚಿದಾಗ 5 ಉಳಿದುವು. ಇನ್ನು ಕಡಿಮೆ ಅಂದರೆ ಎಷ್ಟಿದ್ದರೆ ಸಮಾನವಾಗಿ ನೀಡಬಹುದು?

? 12 ನಿಂಬೆ ಹಣ್ಣುಗಳನ್ನು 2 ಮಂದಿಗೆ ಸಮಾನವಾಗಿ ಹಂಚಿದರೆ ಪ್ರತಿಯೊಬ್ಬರಿಗೆ ಎಷ್ಟು ನಿಂಬೆಹಣ್ಣುಗಳು ಲಭಿಸಬಹುದು? ☐

4 ಮಂದಿಗೆ ಹಂಚುವಾಗಲೋ? ☐

12 ÷ 2 =

12 ÷ 4 =

2 ಮಂದಿಗೆ ಹಂಚುವಾಗ ಮತ್ತು 4 ಮಂದಿಗೆ ಹಂಚುವಾಗ ಸಿಕ್ಕಿದ ಸಂಖ್ಯೆಗಳೊಳಗಿನ ಸಂಬಂಧವೇನು?

## ಮಾಡಿ ನೋಡದೆ ಹೇಳುವ

? ಸಿನಿ ಒಂದು ಸಂಖ್ಯೆಯನ್ನು 4 ರಿಂದ ಭಾಗಿಸುವುದರ ಬದಲು 2ರಿಂದ ಭಾಗಿಸಿ 100ಎಂದು ಬರೆದಳು. 4 ರಿಂದ ಭಾಗಿಸಿದರೆ ಸಿಗುವ ಭಾಗಲಬ್ಧ ಎಷ್ಟಾಗಿರಬಹುದು?

? ಒಂದು ಸಂಖ್ಯೆಯನ್ನು 3 ರಿಂದ ಭಾಗಿಸಿದಾಗ 10 ಭಾಗಲಬ್ಧ ಮತ್ತು 2 ಶೇಷ ಲಭಿಸಿತು. ಸಂಖ್ಯೆ ಯಾವುದು?

? 91ನ್ನು 10ರಿಂದ ಭಾಗಿಸಿದಾಗ ಶೇಷ ಎಷ್ಟು?

### ಬಾಯಿ ಲೆಕ್ಕ

| | |
|---|---|
| 2 × 5 × ☐ | = 240 |
| 2 × ☐ × 5 | = 750 |
| 25 × ☐ × 4 | = 2000 |
| 19 × 50 × ☐ | = 1900 |
| 20 × 50 × ☐ | = 5000 |

## ಪೂರ್ತಿಗೊಳಿಸೋಣ

100 ÷ 4 =

200 ÷ 4 =

400 ÷ 4 =

800 ÷ 4 =

1600 ÷ 4 =

## ಮಾಡಿ ನೋಡುವ

200 ÷ 4

200 ರಲ್ಲಿ ☐ ರ 50 ಗುಂಪುಗಳಿವೆ

50 × ☐ = ☐

☐ ರಲ್ಲಿ 50 4 ಗಳಿವೆ

200 ರಿಂದ ☐ ಸಲ 4 ನ್ನು ತೆಗೆಯಬಹುದು



## ವಿಶೇಷತೆ ಏನು?

- 1ರಿಂದ 100ರ ವರೆಗಿನ ಸಂಖ್ಯೆಗಳಲ್ಲಿ ಒಂದರ ಸ್ಥಾನದಲ್ಲಿ 0 ಬರುವ ಸಂಖ್ಯೆಗಳು ಯಾವುವು? ಅವುಗಳನ್ನು 2, 5, 10 ರಿಂದ ಭಾಗಿಸಿ ನೋಡಿರಿ.
- 45, 53, 61, 65, 70, 80 ಎಂಬೀ ಸಂಖ್ಯೆಗಳನ್ನು 5 ರಿಂದ ಭಾಗಿಸಿ ಶೇಷ ಕಂಡುಹಿಡಿಯಿರಿ. 5 ರಿಂದ ಭಾಗಿಸಿದಾಗ ಶೇಷವಿಲ್ಲದ ಸಂಖ್ಯೆಗಳ ವಿಶೇಷತೆಯೇನು?

## ಶೇಷ ಎಷ್ಟು?

■ ಕೆಳಗೆ ನೀಡಿರುವ ಸಂಖ್ಯೆಗಳನ್ನು 4 ರಿಂದ ಭಾಗಿಸಿದಾಗ ಸಿಗುವ ಶೇಷ ಕಂಡುಹಿಡಿಯಿರಿ.

17, 26, 43, 24, 30, 47

- ಶೇಷವಾಗಿ ಸಿಕ್ಕಿದ ಸಂಖ್ಯೆಗಳ ವಿಶೇಷತೆಯೇನು?

? ಒಂದು ಸಂಖ್ಯೆಯನ್ನು 6 ರಿಂದ ಭಾಗಿಸಿದಾಗ ಯಾವೆಲ್ಲಾ ಸಂಖ್ಯೆಗಳು ಶೇಷವಾಗಿ ಬರಬಹುದು?

## ಶೇಷ ಕಂಡುಹಿಡಿಯುವ

ಒಂದೊಂದು ಉದಾಹರಣೆಗಳನ್ನು ಬರೆದು ಪಟ್ಟಿ ಪೂರ್ತಿಗೊಳಿಸಿರಿ.

| | 5 ಶೇಷ ಬರುವ ಸಂಖ್ಯೆ | 4 ಶೇಷ ಬರುವ ಸಂಖ್ಯೆ | 3 ಶೇಷ ಬರುವ ಸಂಖ್ಯೆ | 2 ಶೇಷ ಬರುವ ಸಂಖ್ಯೆ | 1 ಶೇಷ ಬರುವ ಸಂಖ್ಯೆ |
|---|---|---|---|---|---|
| 3 ರಿಂದ ಭಾಗಿಸಿದಾಗ | | | | | |
| 4 ರಿಂದ ಭಾಗಿಸಿದಾಗ | | | | | |
| 5 ರಿಂದ ಭಾಗಿಸಿದಾಗ | | | | | |
| 6 ರಿಂದ ಭಾಗಿಸಿದಾಗ | | | | | |

■ ಹೊಸದಾಗಿ ಲಭಿಸಿದ 56 ಕಥೆ ಪುಸ್ತಕಗಳನ್ನು 7 ತರಗತಿಗಳ ಲೈಬ್ರರಿಗಳಿಗೆ ಸಮಾನವಾಗಿ ಹಂಚಿ ನೀಡಿದರು. ಪ್ರತಿಯೊಂದು ತರಗತಿ ಲೈಬ್ರರಿಗೆ ಎಷ್ಟು ಪುಸ್ತಕಗಳು ಲಭಿಸಿರಬಹುದು?



■ ಒಂದು ಸಂಖ್ಯೆಯನ್ನು 6 ರಿಂದ ಗುಣಿಸುವುದರ ಬದಲು 9 ರಿಂದ ಗುಣಿಸಿದಾಗ 216 ಉತ್ತರ ಸಿಕ್ಕಿತು.

? 6 ರಿಂದ ಗುಣಿಸಿರುವುದಾದರೆ ಎಷ್ಟು ಲಭಿಸಬಹುದು?

? 9 ರಿಂದ ಗುಣಿಸಿದಾಗ ಸಿಕ್ಕಿದ ಸಂಖ್ಯೆಯನ್ನು 6 ರಿಂದ ಭಾಗಿಸಿದಾಗ ಸಿಗುವ ಭಾಗಲಬ್ಧ ಎಷ್ಟು?

■ ರಾಮು 400 ರೂಪಾಯಿಗಳಿಗೆ 5 ಕಿಲೋಗ್ರಾಂ ಸಕ್ಕರೆ ಮತ್ತು 5 ಕಿಲೋಗ್ರಾಂ ಬೆಲ್ಲ ಖರೀದಿಸಿದನು. ಒಂದು ಕಿಲೋ ಬೆಲ್ಲಕ್ಕೆ ಒಂದು ಕಿಲೋ ಸಕ್ಕರೆಗಿಂತ 12 ರೂಪಾಯಿ ಹೆಚ್ಚು. ಪ್ರತಿಯೊಂದರ ಒಂದು ಕಿಲೋಗ್ರಾಂನ ಬೆಲೆ ಎಷ್ಟು? 5 ಕಿಲೋ ಗ್ರಾಂಗಳಿಗೋ?

? 421ನ್ನು 2, 3, 4, 5, 6, 7 ಎಂಬೀ ಸಂಖ್ಯೆಗಳಿಂದ ಭಾಗಿಸಿ ನೋಡಿರಿ. ಶೇಷಗಳಿಗೆ ಇರುವ ವಿಶೇಷತೆಯೇನು? 419 ನ್ನು ಇದೇ ಸಂಖ್ಯೆಗಳಿಂದ ಭಾಗಿಸಿದರೋ? 420ನ್ನಾದರೋ?

## ಬಿಲ್ ಪೂರ್ತಿಗೊಳಿಸಿರಿ

ಜೋನಿ ಖರೀದಿಸಿದ ತರಕಾರಿಗಳ ಬಿಲ್ ಕೆಳಗೆ ನೀಡಲಾಗಿದೆ.

| 1 ಕಿಲೋಗ್ರಾಂನ ಬೆಲೆ | ತರಕಾರಿಯ ಹೆಸರು | ಖರೀದಿಸಿದ ತರಕಾರಿ (ಕಿಲೋಗ್ರಾಂ) | ಬೆಲೆ (ರೂಪಾಯಿ) |
|---|---|---|---|
| | ಸೌತೆಕಾಯಿ | 9 | 144 |
| | ಹರಿವೆ | 5 | 90 |
| | ಟೊಮೆಟೋ | 8 | 64 |
| | ಹಾಗಲಕಾಯಿ | 6 | 150 |
| | ನೇಂದ್ರ ಬಾಳೆಕಾಯಿ | 8 | 320 |
| | ನುಗ್ಗೆ | 4 | 160 |
| | ನೀರುಳ್ಳಿ | 8 | 128 |
| | ಪಡುವಲಕಾಯಿ | 3 | 75 |
| | ಅಲಸಂಡೆ | 7 | 105 |
| | | ಒಟ್ಟು | |

ಪ್ರತಿಯೊಂದು ತರಕಾರಿಯ ಒಂದು ಕಿಲೋಗ್ರಾಂನ ಬೆಲೆ ಕಂಡುಹಿಡಿದು ಬಿಲ್ ಪೂರ್ತಿಗೊಳಿಸಿರಿ.



| ನಾನು ಮಾಡಿ ನೋಡಿದಾಗ | ಹೌದು | ಅಲ್ಲ |
|---|---|---|
| ಏನನ್ನು ಕಂಡುಹಿಡಿಯಬೇಕು ಎಂದು ನನಗೆ ತಿಳಿಯಿತು. | | |
| ಉತ್ತರಕ್ಕೆ ತಲುಪಲು ಏನೇನು ಕ್ರಿಯೆಗಳನ್ನು ಮಾಡಬೇಕೆಂದು ಕಂಡುಕೊಂಡೆನು. | | |
| ಯೋಗ್ಯ ರೀತಿಯಲ್ಲಿ ಸರಿಯಾದ ಉತ್ತರಕ್ಕೆ ತಲುಪಲು ಸಾಧ್ಯವಾಯಿತು | | |
| ಉತ್ತರ ಸರಿಯೆಂದು ಇತರರಿಗೆ ತಿಳಿಸಲು ಸಾಧ್ಯವಾಯಿತು | | |



- ? 528 ಮಕ್ಕಳನ್ನು 8 ಸಾಲುಗಳಲ್ಲಿ ನಿಲ್ಲಿಸಿದರೆ ಒಂದು ಸಾಲಿನಲ್ಲಿ ಎಷ್ಟು ಮಕ್ಕಳಿರಬಹುದು? 6 ಸಾಲುಗಳಲ್ಲಾದರೋ?
- 7 ತರಗತಿ ಕೋಣೆಗಳಲ್ಲಿ 126 ಮಕ್ಕಳು ಪರೀಕ್ಷೆ ಬರೆಯುತ್ತಿದ್ದಾರೆ. ಪ್ರತಿಯೊಂದು ತರಗತಿಯಲ್ಲಿರುವ ಮಕ್ಕಳ ಸಂಖ್ಯೆ ಸಮಾನವಾಗಿದ್ದರೆ ಒಂದು ತರಗತಿ ಕೋಣೆಯಲ್ಲಿ ಎಷ್ಟು ಮಕ್ಕಳು ಪರೀಕ್ಷೆ ಬರೆಯುತ್ತಿದ್ದಾರೆ?
- ಶಾಲಾ ಸೊಸೈಟಿಗೆ ಪೆನ್ನುಗಳನ್ನು ಖರೀದಿಸಲು ರಝಾಂ ವ್ಯಾಪಾರಿಯ ಬಳಿಗೆ ಹೋದರು. ಅಲ್ಲಿ 6 ರೂಪಾಯಿ, 7 ರೂಪಾಯಿ, 8 ರೂಪಾಯಿ, 9 ರೂಪಾಯಿಗಳ ಬೆಲೆಯಿರುವ ಪೆನ್ನುಗಳಿದ್ದುವು.
- ? 7 ರೂಪಾಯಿ ಬೆಲೆಯಿರುವ 72 ಪೆನ್ನುಗಳನ್ನು ಖರೀದಿಸಿದರು. ಒಟ್ಟು ಎಷ್ಟು ರೂಪಾಯಿ ಆಗಬಹುದು?
- ? ಇದೇ ಬೆಲೆಗೆ 8 ರೂಪಾಯಿಯ ಪೆನ್ನುಗಳನ್ನು ಖರೀದಿಸುತ್ತಿದ್ದರೆ ಎಷ್ಟು ಪೆನ್ನುಗಳು ಲಭಿಸಬಹುದು?
- ? 9 ರೂಪಾಯಿಯದ್ದಾದರೋ?
- ? 6 ರೂಪಾಯಿಯ ಪೆನ್ನುಗಳನ್ನು ಖರೀದಿಸುತ್ತಿದ್ದರೆ 9 ರೂಪಾಯಿಯ ಪೆನ್ನುಗಳಿಗಿಂತ ಎಷ್ಟು ಹೆಚ್ಚು ಸಿಗಬಹುದಿತ್ತು?
- 5 ನೆಲ್ಲಿಕಾಯಿಗಳಿಗೆ 8 ರೂಪಾಯಿಯಂತೆ ರಾಜು ತನ್ನ ಬಳಿಯಿದ್ದ 140 ನೆಲ್ಲಿಕಾಯಿಗಳನ್ನು ಮಾರಿದನು. ರಾಜುವಿಗೆ ಲಭಿಸುವ ಹಣವೆಷ್ಟು?
- ಹಂಝ 5 ರೂಪಾಯಿಯಂತೆ 505 ರೂಪಾಯಿಗಳಿಗೆ ಖರೀದಿಸಿದ ಪೆನ್ನುಗಳನ್ನು 7 ರೂಪಾಯಿಯಂತೆಯೂ, 6 ರೂಪಾಯಿಯಂತೆ 492 ರೂಪಾಯಿಗಳಿಗೆ ಖರೀದಿಸಿದ ನೋಟುಪುಸ್ತಕಗಳನ್ನು 8 ರೂಪಾಯಿಯಂತೆಯೂ, 8 ರೂಪಾಯಿಯಂತೆ 560 ರೂಪಾಯಿಗಳಿಗೆ ಖರೀದಿಸಿದ ಪೆನ್ಸಿಲ್ ಬಾಕ್ಸ್‌ಗಳನ್ನು 10 ರೂಪಾಯಿಯಂತೆಯೂ ಮಾರಾಟ ಮಾಡಿದನು. ಅವನಿಗೆ ಸಿಗುವ ಒಟ್ಟು ಲಾಭವೆಷ್ಟು?
- ? ಒಂದು ಸಂಖ್ಯೆಯನ್ನು 4ರಿಂದ ಭಾಗಿಸಿದಾಗ 22 ಸಿಕ್ಕಿತು. ಆ ಸಂಖ್ಯೆಯನ್ನು 2 ರಿಂದ ಭಾಗಿಸಿದಾಗ ಭಾಗಲಬ್ಧ ಎಷ್ಟು? 8 ರಿಂದ ಭಾಗಿಸಿದಾಗಲೋ?

■ ಕೆಳಗೆ ನೀಡಿರುವ ಭಾಗಾಕಾರ ಕ್ರಿಯೆಗಳಲ್ಲಿ ಸರಿಯಾದುದು ಯಾವುದೆಂದು ಕಂಡುಹಿಡಿಯಿರಿ. ತಪ್ಪಾದ ಕ್ರಿಯೆಗಳನ್ನು ಸರಿಮಾಡಿ ಬರೆಯಿರಿ.

```
   1          66          123          28
4|400      4|264       3|369       3|624
  4          24          3           6
 ---        ----        ---         ---
  0           24         06          24
              24          6          24
             ----        ---         ---
                          09          0
                           9
                          ---
                           0
```

```
   79         5          1 1          410          814
6|474      7|353      4|404       5|250       4|377
  42         35        4            20          32
 ----        03       ----         ----         ---
   54                    4           50           5
   54                    4           50           4
  ----                 ----         ----         ---
    0                    0            0           17
                                                  16
                                                  ---
                                                   1
```

## ತಟ್ಟನೆ ಹೇಳಿರಿ

■ 240ನ್ನು 2,3,4,5ಎಂಬೀ ಸಂಖ್ಯೆಗಳಿಂದ ಪೂರ್ಣವಾಗಿ ಭಾಗಿಸಲು ಸಾಧ್ಯವೇ? ಎಂದು ಟೀಚರು ಕೇಳಿದಾಗ ಗೌತಮ್ ಸಾಧ್ಯವಿದೆ ಎಂದು ತಟ್ಟನೆ ಹೇಳಿದನು. ಗೌತಮ್ ಹೇಳಿದ್ದು ಸರಿಯೇ? ಭಾಗಿಸಿ ನೋಡದೆ ಗೌತಮ್ ಇದನ್ನು ಹೇಗೆ ಕಂಡುಕೊಂಡನು?

ಯೋಗ್ಯ ಸಂಖ್ಯೆಗಳನ್ನು ಕಂಡು ಹಿಡಿದು ಕೋಣೆಗಳನ್ನು ಭರ್ತಿ ಗೊಳಿಸಿರಿ.

$2 \times \square \times 3 = 1212$

$2 \times 4 \times \square = 1840$

$5 \times \square \times 2 = 1600$

$\square \times 2 \times 3 = 756$

## ಶೇಷ ಬಾಯಿಲೆಕ್ಕಗಳಲ್ಲಿ

271, 371, 471, 571, 671, 771, 871, 971.

ಈ ಸಂಖ್ಯೆಗಳನ್ನು 9 ರಿಂದ ಭಾಗಿಸಿದಾಗ ಸಿಗುವ ಶೇಷ ಎಷ್ಟೆಂದು ಹೇಳಬಹುದೇ? ಉತ್ತರ ಲಭಿಸಲು ನೀವು ಕಂಡುಕೊಂಡ ದಾರಿ ಯಾವುದು?


## ಎಷ್ಟು ಸುಲಭ

| | | |
|---|---|---|
| 396 ÷ 4 = ? | 711 ÷ 9 = ? | 693 ÷ 7 = ? |
| 396 + 4 = 400 | 711 + 9 = 720 | 693 + 7 = 700 |
| 400 ÷ 4 = 100 | 720 ÷ 9 = 80 | 700 ÷ 7 = 100 |
| 100 − 1 = 99 | 80 − 1 = 79 | 100 − 1 = 99 |
| 396 ÷ 4 = 99 | 711 ÷ 9 = 79 | 693 ÷ 7 = 99 |

# 8 ಎರಡನೇ ಒಂದು ನಾಲ್ಕನೇ ಒಂದು

## ಅರ್ಧಮಾಡುವ


■ ಅಮ್ಮ ಅಡುಗೆಕೋಣೆಯಲ್ಲಿ ಹಪ್ಪಳ ಕಾಯಿಸುವಳು. ಫಾತಿಮ ಒಂದು ಹಪ್ಪಳ ತೆಗೆದಳು.




ಅಮ್ಮ ಒಂದು ಹಪ್ಪಳವನ್ನು ಎರಡಾಗಿ ಮಡಚಿ ತುಂಡುಮಾಡಿ ಅವರಿಗೆ ಕಾಯಿಸಿ ಕೊಟ್ಟಳು.


## ಸಮಭಾಗ

ಒಂದು ರಿಬ್ಬನನ್ನು ಹೇಗೆ ಸಮಾನವಾದ ಎರಡು ತುಂಡುಗಳಾಗಿ ಮಾಡಬಹುದು?
ಒಂದು ಪೈಪಾದರೋ?




## ಅರ್ಧಮಾಡುವ

■ ಚುಕ್ಕಿಗಳನ್ನು ಸೇರಿಸಿ ಗೆರೆ ಎಳೆದು ಆಯತವನ್ನು ಎರಡು ಸಮಭಾಗ ಮಾಡಿರಿ. ಅದರಲ್ಲಿ ಒಂದು ಭಾಗಕ್ಕೆ ಬಣ್ಣ ಹಚ್ಚಿರಿ.



ಉರುಟಿನ ಮಧ್ಯದ ಚುಕ್ಕಿಯ ಮೂಲಕ ಗೆರೆ ಎಳೆದು ಉರುಟನ್ನು ಎರಡು ಭಾಗ ಮಾಡಿರಿ.
ಎರಡು ಭಾಗಗಳು ಸಮಾನವಾಗಿಲ್ಲವೇ?



ಒಂದು ಭಾಗಕ್ಕೆ ಬಣ್ಣ ಹಚ್ಚಿರಿ.


ಆಯತ ಮತ್ತು ಉರುಟನ್ನು ಅರ್ಧಮಾಡಿ ಬಣ್ಣ ಹಚ್ಚಿದ್ದೀರಲ್ಲವೇ? ಇದರಲ್ಲಿ ಪ್ರತಿಯೊಂದು ಭಾಗವನ್ನು ಅದರ ಎರಡನೇ ಒಂದು ಎಂದು ಹೇಳುವರು.

ಎರಡನೇ ಒಂದು ಎಂಬುದು ಎರಡು ಸಮಭಾಗಗಳಲ್ಲಿ ಒಂದು ಭಾಗವಾಗಿದೆ. ಇದನ್ನು $\frac{1}{2}$ ಎಂದು ಬರೆಯುವರು. ಎರಡನೇ ಒಂದು ಎಂದು ಓದುವರು.




## ಎಷ್ಟು ಭಾಗ?









■ ಉರುಟಿನ ಎಷ್ಟು ಭಾಗಕ್ಕೆ ಕೆಂಪು ಬಣ್ಣ ನೀಡಲಾಗಿದೆ? [ ]

ಎಷ್ಟು ಭಾಗಕ್ಕೆ ನೀಲಿ ಬಣ್ಣ ನೀಡಲಾಗಿದೆ? [ ]

ಕೆಳಗೆ ನೀಡಿರುವವುಗಳಲ್ಲಿ ಯಾವುದೆಲ್ಲಾ $\frac{1}{2}$ ನ್ನು ಸೂಚಿಸುತ್ತದೆ? ಅದರ ಕೆಳಗೆ ✓ಗುರುತಿಸಿರಿ.







## ಬಣ್ಣ ಹಚ್ಚಿರಿ

- ಕೆಳಗೆ ನೀಡಿರುವ ಚಿತ್ರಗಳನ್ನು $\frac{1}{2}$ ಭಾಗ ಮಾಡಿದ ನಂತರ ಒಂದು ಭಾಗಕ್ಕೆ ಬಣ್ಣ ಹಚ್ಚಿರಿ.



## ಆಯತದ ಅರ್ಧ

ಆಯತವನ್ನು $\frac{1}{2}$ ಭಾಗ ಮಾಡಿರುವುದನ್ನು ನೋಡಿರಿ.



ಉಳಿದಂತೆ ಯಾವ ಯಾವ ರೀತಿಯಲ್ಲಿ $\frac{1}{2}$ ಭಾಗ ಮಾಡಬಹುದು? $\frac{1}{2}$ ಭಾಗಕ್ಕೆ ಬಣ್ಣ ಹಚ್ಚಿರಿ.



ಇವುಗಳು $\frac{1}{2}$ ವೆಂದು ಹೇಗೆ ದೃಢಪಡಿಸಿಕೊಳ್ಳುವಿರಿ?

ಕಾಗದದಲ್ಲಿ ಚಿತ್ರ ಮಾಡಿ ತುಂಡುಮಾಡಿ ಒಂದರ ಮೇಲೊಂದು ಇಟ್ಟು ನೋಡಿರಿ.




## ಮಿಠಾಯಿ ಹಂಚಿಕೊಳ್ಳೋಣ

ತೀರ್ಥಳ ಜನ್ಮದಿನದಂದು ಅವಳು ನೀಡಿದ 4 ಮಿಠಾಯಿಗಳೊಂದಿಗೆ ಫಾತಿಮ ಮನೆಗೆ ಬಂದಳು. ನಾಲ್ಕು ಮಿಠಾಯಿಗಳಿವೆ.

'ನನಗೆ ಮಿಠಾಯಿ ಬೇಕು' ಫವಾಸ್ ಹೇಳಿದನು.

'ಅರ್ಧ ಕೊಡುವ'

ಫಾತಿಮ ಅವನಿಗೆ ಅರ್ಧದಷ್ಟು ಮಿಠಾಯಿಗಳನ್ನು ನೀಡಿದಳು.

ಅವಳು ನೀಡಿದ ಮಿಠಾಯಿಗಳೆಷ್ಟು?

ಫಾತಿಮಗಳಿಗೆ 6 ಮಿಠಾಯಿಗಳು ಲಭಿಸಿರುತ್ತಿದ್ದರೇ?







### ಬಿರಿದ ಮೊಟ್ಟೆಗಳೆಷ್ಟು?

16 ಮೊಟ್ಟೆಗಳನ್ನು ಕಾವು ಕೊಡಲು ಇರಿಸಿದೆವು. ಅವುಗಳಲ್ಲಿ ಅರ್ಧದಷ್ಟು ಸಂಖ್ಯೆಯ ಮೊಟ್ಟೆಗಳು ಬಿರಿದು ಮರಿಗಳಾದುವು. ಬಿರಿದ ಮೊಟ್ಟೆಗಳೆಷ್ಟು? ಮರಿಗಳಲ್ಲಿ ಅರ್ಧದಷ್ಟು ಹುಂಜಗಳಾದವು. ಆದರೆ ಹುಂಜಗಳೆಷ್ಟು?

- ಫಾತಿಮಳ ತರಗತಿಯಲ್ಲಿ 32 ಮಕ್ಕಳಿದ್ದಾರೆ. ಅವರಲ್ಲಿ ಅರ್ಧದಷ್ಟು ಮಂದಿ ಹೆಣ್ಣು ಮಕ್ಕಳು. ಹಾಗಾದರೆ ಹೆಣ್ಣು ಮಕ್ಕಳ ಸಂಖ್ಯೆ ಎಷ್ಟು?

## ಅರ್ಧಮಾಡಿದರೆ ಎಷ್ಟು?

| | |
|---|---|
| ಬ್ಯಾಗ್ | 2 |
| ಕೊಡೆ | 2 |
| ಪೆನ್ನು | 4 |
| ಪೆನ್ಸಿಲು | 2 |
| ಕ್ರಯೋನ್ | 8 |
| ಕಲರ್‌ಪೆನ್ನು | 1 ಡಜನ್ |
| ರಬ್ಬರ್ | 1 ಡಜನ್ |

## ತರಕಾರಿ ತೋಟ

ಫಾತಿಮಳ ತರಕಾರಿ ತೋಟ ಆಯತಾಕೃತಿಯಲ್ಲಿದೆ.




ಅದನ್ನು ನಾಲ್ಕು ಸಮಾನ ಭಾಗಗಳಾಗಿ ಮಾಡಿದಳು. ಒಂದು ಭಾಗದಲ್ಲಿ ಅಲಸಂಡೆ, ಒಂದು ಭಾಗದಲ್ಲಿ ಚೀನಿಕಾಯಿ, ಎರಡು ಭಾಗಗಳಲ್ಲಿ ಹರಿವೆ ಕೃಷಿ ಮಾಡಿದಳು. ಒಟ್ಟು ಎಷ್ಟು ಭಾಗಗಳನ್ನಾಗಿ ಮಾಡಲಾಗಿದೆ? ☐

ಅದರ ಎಷ್ಟು ಭಾಗದಲ್ಲಿ ಅಲಸಂಡೆ ಕೃಷಿ ಮಾಡಲಾಗಿದೆ? ☐

ಅಲಸಂಡೆ ಕೃಷಿ ಒಟ್ಟು ಇರುವುದರ ನಾಲ್ಕನೇ ಒಂದು ಭಾಗದಲ್ಲಾಗಿದೆ.

ನಾಲ್ಕು ಸಮಾನ ಭಾಗಗಳಲ್ಲಿ ಒಂದು ಭಾಗವನ್ನು ನಾಲ್ಕನೇ ಒಂದು ಎಂದು ಕರೆಯಬಹುದು.

ಇದನ್ನು $\frac{1}{4}$ ಎಂದು ಬರೆಯಬಹುದು.




ಚೀನಿಕಾಯಿ ಕೃಷಿ ಮಾಡಿರುವುದು ಎಷ್ಟು ಭಾಗದಲ್ಲಿ?

ಇದನ್ನು ಹೇಗೆ ಬರೆಯಬಹುದು?

ಹಾಗಾದರೆ ಹರಿವೆ ಕೃಷಿ ಮಾಡಿರುವುದು ಎಷ್ಟು ಭಾಗಗಳಲ್ಲಿ?

ಹೇಗೆ ಬರೆಯಬಹುದು?

## ಬೆಳೆಕೊಯ್ಲು

ತರಕಾರಿ ತೋಟದಿಂದ ದೊಡ್ಡದೊಂದು ಚೀನಿಕಾಯಿಯನ್ನು ಕೊಯ್ದರು. ಚೀನಿಕಾಯಿಯನ್ನು ಅವರು ನಾಲ್ಕು ಸಮಭಾಗಗಳನ್ನಾಗಿ ಮಾಡಿದರು. ಪ್ರತಿಯೊಂದು ತುಂಡು, ಚೀನಿಕಾಯಿಯ ಎಷ್ಟನೇ ಭಾಗ?



ಒಂದು ಭಾಗವನ್ನು ಅವರಿಗಾಗಿ ತೆಗೆದಿರಿಸಿದರು. ಬಾಕಿ ಇರುವುದು ಎಷ್ಟು ಭಾಗಗಳು?

ನಾಲ್ಕು ಸಮಾನಭಾಗಗಳಾಗಿ ಮಾಡಿರುವುದರಲ್ಲಿ 3 ಭಾಗಗಳನ್ನು ನಾಲ್ಕನೇ ಮೂರು ಎಂದು ಹೇಳುವರು.

ಇದನ್ನು $\frac{3}{4}$ ಎಂದು ಬರೆಯಬಹುದು.





ಫವಾಸ್ ಚೀನಿಕಾಯಿಯ ಒಂದು ಭಾಗವನ್ನು ತೆಗೆದುಕೊಂಡು ಎಬಿಯ ಮನೆಗೆ ಹೋದನು. ಫಾತಿಮ ಉಳಿದೆರಡು ಭಾಗಗಳಿಂದ ಒಂದನ್ನು ತೀರ್ಥಳ ಮನೆಗೂ ಮತ್ತೊಂದು ನಂದುವಿನ ಮನೆಗೂ ನೀಡಿದಳು.

ಫವಾಸ್‌ನ ಕೈಯಲ್ಲಿರುವ ಭಾಗವನ್ನು ಸೂಚಿಸುವುದು ಹೇಗೆ?

ಹೀಗೆ ಫಾತಿಮ ಕೊಂಡುಹೋದವುಗಳನ್ನು ಹೇಗೆ ಸೂಚಿಸಬಹುದು?


## ಬಣ್ಣ ಕೊಟ್ಟಿರುವ ಭಾಗಗಳು

ಬಣ್ಣ ಕೊಟ್ಟಿರುವ ಭಾಗಗಳನ್ನು ಹೇಗೆ ಸೂಚಿಸಬೇಕೆಂದು ಬಲಭಾಗದಲ್ಲಿರುವ ಆಯತದಲ್ಲಿ ಬರೆಯಿರಿ.




## ಆಕೃತಿಗಳನ್ನು ರಚಿಸಿ ಬಣ್ಣ ಹಚ್ಚುವ

ಒಂದು ಆಯತದ $\frac{1}{4}$ ಭಾಗವನ್ನು ಹೇಗೆಲ್ಲಾ ಸೂಚಿಸಬಹುದು. ಪ್ರತಿಯೊಂದು ಆಯತದಲ್ಲೂ ವಿಭಿನ್ನ ರೀತಿಯಲ್ಲಿ ರಚಿಸಿ $\frac{1}{4}$ ಭಾಗಕ್ಕೆ ಬಣ್ಣ ಹಚ್ಚಿರಿ.



## ಬಣ್ಣ ಹಚ್ಚಿದ್ದು

$\frac{1}{4}$ ಭಾಗಕ್ಕೆ ಬಣ್ಣ ಕೊಟ್ಟಿರುವ ಚಿತ್ರಗಳಿಗೆ $\surd$ ಗುರುತಿಸಿರಿ.



## ಅಕ್ಷರ ಕೌತುಕ

ಪ್ರತಿಯೊಂದು ಅಕ್ಷರವನ್ನು ಸಮಾನವಾದ ಎರಡು ಭಾಗಗಳಾಗಿ ಮಾಡಿರಿ. ಅದರಲ್ಲಿ ಒಂದು ಭಾಗಕ್ಕೆ ಇಷ್ಟವಿರುವ ಬಣ್ಣ ಹಚ್ಚಿರಿ.

MATHS



# 9 ದೂರ ಮತ್ತು ಭಾರ

## ಸೌಮ್ಯಳ ದಿನಚರಿ

**2015** — **December 28**

*ಕ್ರಿಸ್‌ಮಸ್ ರಜೆ ಕಳೆದು ಹೊಸ ಪೆನ್ಸಿಲಿನೊಂದಿಗೆ ಇಂದು ನಾನು ತರಗತಿಗೆ ಹೋದೆನು. ಹೊಸ ಪೆನ್ಸಿಲನ್ನು ಸಹಪಾಠಿಗಳಿಗೂ, ಟೀಚರಿಗೂ ತೋರಿಸಿದೆನು. ಈ ಪೆನ್ಸಿಲಿನ ಉದ್ದ ಎಷ್ಟೆಂದು ಊಹಿಸಿ ಬರೆಯಬಹುದೇ? ಟೀಚರು ಥಕ್ಕನೆ ಕೇಳಿದರು.*

*ನಾವೆಲ್ಲರೂ ಬರೆದೆವು. ಅಳತೆ ಮಾಡಿದಾಗ ತರಗತಿಯ 30 ಮಕ್ಕಳಲ್ಲಿ 4 ಮಕ್ಕಳ ಊಹೆಯು ಸರಿಯಾಗಿತ್ತು. ನನ್ನ ಊಹೆಯೂ ಸರಿಯಾಗಿರಲಿಲ್ಲ......*

ಸೌಮ್ಯಳ ದಿನಚರಿಯನ್ನು ಓದಿದಿರಲ್ಲವೇ.

**?** ಟೀಚರ ಕೈಯಲ್ಲಿರುವ ಪೆನ್ಸಿಲಿನ ಉದ್ದ ಎಷ್ಟೆಂದು ಊಹಿಸಿ ಬರೆಯಿರಿ.

| | ನನ್ನ ಊಹೆ | ಸಹಪಾಠಿಯ ಊಹೆ |
|---|---|---|
| ಊಹೆ | ______ ಸೆ.ಮೀ. | ______ ಸೆ.ಮೀ. |
| ಅಳೆದಾಗ | ______ ಸೆ.ಮೀ. | |

ಊಹೆ ಮತ್ತು ಸರಿಯಾದ ಅಳತೆಯೊಳಗಿನ ವ್ಯತ್ಯಾಸ

ನನ್ನದು ______ ಸೆ.ಮೀ. ಸಹಪಾಠಿಯದ್ದು ______ ಸೆ.ಮೀ.

## ಉದ್ದ ಎಷ್ಟು?

ನೀವು ಯಾವ ಯಾವ ನೋಟುಗಳನ್ನು ಕಂಡಿದ್ದೀರಿ?










10 ರೂಪಾಯಿ ನೋಟಿನ ಉದ್ದ ______ ಸೆ.ಮೀ. ______ ಮಿ.ಮೀ.

ನಿಮ್ಮ ಮತ್ತು ಸಹಪಾಠಿಯ ಊಹೆಯ ವ್ಯತ್ಯಾಸವನ್ನು ಹೇಳಬಹುದೇ? ______

- 20 ರೂಪಾಯಿಯ ಮತ್ತು 50 ರೂಪಾಯಿಯ ನೋಟುಗಳ ಉದ್ದವನ್ನು ಇದೇ ರೀತಿ ಅಳತೆ ಮಾಡಿ ನೋಡಿರಿ.

20 ರೂ. ........ ಸೆ.ಮೀ.. ........ ಮಿ.ಮೀ.

50 ರೂ. ........ ಸೆ.ಮೀ. ........ ಮಿ.ಮೀ

**ನಾನು ತಿಳಿದ ವಿಚಾರ**

10 ಮಿಲ್ಲಿ ಮೀಟರ್ =

100 ಮಿಲ್ಲಿ ಮೀಟರ್ =

1000 ಮಿಲ್ಲಿ ಮೀಟರ್ =


- 100 ರೂಪಾಯಿ ನೋಟಿನ ಉದ್ದ : ನನ್ನ ಊಹೆ ______

ಅಳೆದು ನೋಡಿದಾಗ ______ ವ್ಯತ್ಯಾಸ ______

## ಮಳೆಯ ಅಳತೆ



- ಇಡುಕ್ಕಿ ಅಣೆಕಟ್ಟಿನ ಸಮೀಪ ಪ್ರದೇಶಗಳಲ್ಲಿ ಅಗೋಸ್ತು ತಿಂಗಳು ಒಂದು ವಾರ ಸುರಿದ ಮಳೆಯ ಅಳತೆಯನ್ನು ಸೂಚಿಸುವ ಚಿತ್ರವನ್ನು ಕೆಳಗೆ ಕೊಡಲಾಗಿದೆ. ಅದು ಎಷ್ಟೆಂದು ಅಳೆದು ಬರೆಯಿರಿ.




ಮಳೆಯ ಅಳತೆಯನ್ನು ಸೂಚಿಸುವ ಉದ್ದವನ್ನು ಮಡಲ ಕಡ್ಡಿ ತುಂಡುಮಾಡಿ ಕಡಿಮೆ ಅಳತೆಯಿಂದ ಹೆಚ್ಚು ಅಳತೆಗೆ ಕ್ರಮವಾಗಿ ಒಂದು ಪೇಪರಿನಲ್ಲಿ ಅಂಟಿಸಿ ನೋಡಿರಿ. ಅವುಗಳ ಮುಂದೆ ದಿವಸಗಳನ್ನು ಬರೆಯಿರಿ.

## ಬದಲಾಯಿಸಿ ಬರೆಯುವ

| | |
|---|---|
| 36 ಮಿ.ಮೀ. = 3 ಸೆಂಟಿಮೀಟರ್ 6 ಮಿಲ್ಲಿಮೀಟರ್ | 7 ಸೆ.ಮೀ, 3ಮಿ.ಮೀ = 73ಮಿಲ್ಲಿಮೀಟರ್ |
| 25 ಮಿ.ಮೀ = | 8 ಸೆ.ಮೀ9 ಮಿ.ಮೀ. = |
| 104 ಮಿ.ಮೀ = | 10 ಸೆ.ಮೀ 8 ಮಿ.ಮೀ = |
| 50ಮಿ.ಮೀ = | 5ಸೆ.ಮೀ 1 ಮಿ.ಮೀ = |

## ಅಳೆಯುವ


| ವಸ್ತುಗಳು | ಅಳೆದಾಗ |
|---|---|
| ನೋಟು ಪುಸ್ತಕದ ಉದ್ದ | ..... ಸೆಂಟಿಮೀಟರ್ .... ಮಿಲ್ಲಿಮೀಟರ್ |
| ಗಣಿತ ಪುಸ್ತಕದ ಉದ್ದ | ..... ಸೆಂಟಿಮೀಟರ್ .... ಮಿಲ್ಲಿಮೀಟರ್ |
| ಚಾಕು | .... ಸೆಂಟಿಮೀಟರ್ .... ಮಿಲ್ಲಿಮೀಟರ್ |
| ಕ್ರಯೋನ್ಸ್ | .... ಸೆಂಟಿಮೀಟರ್ .... ಮಿಲ್ಲಿಮೀಟರ್ |
| ಪೆನ್ಸಿಲ್ | .... ಸೆಂಟಿಮೀಟರ್ .... ಮಿಲ್ಲಿಮೀಟರ್ |
| | .... ಸೆಂಟಿಮೀಟರ್ .... ಮಿಲ್ಲಿಮೀಟರ್ |
| | .... ಸೆಂಟಿಮೀಟರ್ .... ಮಿಲ್ಲಿಮೀಟರ್ |

## ಹೆಸರು ಬರೆಯುವ

- ಒಂದು ಸೆಂಟಿಮೀಟರ್‌ಗಿಂತ ಕಡಿಮೆ ಉದ್ದವಿರುವ ಎಷ್ಟು ವಸ್ತುಗಳ ಹೆಸರು ನಿಮಗೆ ತಿಳಿದಿವೆ.

| | | |
|---|---|---|
| • ಅಕ್ಕಿ ಕಾಳು | • ಪೆನ್ಸಿಲಿನ ಮೊನೆ | • |
| • | • | • |
| • | • | • |

? ನೀವು ಓದುವ ವಾರ್ತಾಪತ್ರಿಕೆಯ ಎರಡು ವಾರ್ತೆ ಕಾಲಂಗಳೊಳಗಿನ ಅಂತರ ಎಷ್ಟು? ಎಲ್ಲಾ ಕಾಲಂಗಳೊಳಗಿನ ಅಂತರವು ಸಮಾನವಾಗಿದೆಯೇ?



## ಆಟಿಕೆ

- ಅಪ್ಪು ಎರಡು ಮದ್ದಿನ ಪೆಟ್ಟಿಗೆಗಳಿಂದ ತಯಾರಿಸಿದ ಆಟಿಕೆಯನ್ನು ನೋಡಿರಿ.

ಒಂದನೇ ಪೆಟ್ಟಿಗೆಯ ಉದ್ದವು 9 ಸೆಂಟಿಮೀಟರ್ 6 ಮಿಲ್ಲಿಮೀಟರ್ ಆಗಿದೆ. ಎರಡನೆಯದರ ಉದ್ದವು 7 ಸೆಂಟಿಮೀಟರ್ 8 ಮಿಲ್ಲಿಮೀಟರ್ ಆಗಿದೆ.


? ಆಟಿಕೆಯ ಒಟ್ಟು ಉದ್ದವೆಷ್ಟು?

ಹೇಗೆ ಕಂಡುಹಿಡಿಯುವಿರಿ?

- ಎರಡು ಪೆಟ್ಟಿಗೆಗಳ ಉದ್ದವನ್ನು ಕೊಡಲಾಗಿದೆ.
- ಪ್ರತಿಯೊಂದು ಪೆಟ್ಟಿಗೆಯ ಉದ್ದವು ಸೆಂಟಿಮೀಟರ್ ಮತ್ತು ಮಿಲ್ಲಿಮೀಟರ್‌ನಲ್ಲಾಗಿದೆ.
- ಇವುಗಳನ್ನು ಕೂಡಿಸಿ ನೋಡಿರಿ.




9 ಸೆಂಟಿಮೀಟರ್ 6 ಮಿಲ್ಲಿಮೀಟರ್ +
7 ಸೆಂಟಿಮೀಟರ್ 8 ಮಿಲ್ಲಿಮೀಟರ್
---
16 ಸೆಂಟಿಮೀಟರ್ 14 ಮಿಲ್ಲಿಮೀಟರ್
---
16 ಸೆಂಟಿಮೀಟರ್ +
1 ಸೆಂಟಿಮೀಟರ್ 4 ಮಿಲ್ಲಿಮೀಟರ್
---
17 ಸೆಂಟಿಮೀಟರ್ 4 ಮಿಲ್ಲಿ ಮೀಟರ್




ಆಟಿಕೆಯ ಒಟ್ಟು ಉದ್ದ ____________

## ಎರಡು ತುಂಡುಗಳು

16 ಸೆಂಟಿಮೀಟರ್ ಉದ್ದವಿರುವ ಒಂದು ನೂಲನ್ನು ಎರಡು ತುಂಡುಗಳಾಗಿ ಮಾಡಲಾಯಿತು. ಒಂದು ತುಂಡಿನ ಉದ್ದ 8 ಸೆಂಟಿಮೀಟರ್ 6 ಮಿಲ್ಲಿಮೀಟರ್ ಆದರೆ ಎರಡನೆಯ ತುಂಡಿನ ಉದ್ದವೆಷ್ಟು?

- ಯಾವ ಯಾವ ವಿವರಗಳನ್ನು ನೀಡಲಾಗಿದೆ?
  - ದೊಡ್ಡ ನೂಲಿನ ಉದ್ದ ☐
  - ತುಂಡು ಮಾಡಿ ತೆಗೆದ ನೂಲಿನ ಉದ್ದ ☐
- ಎರಡನೆಯ ತುಂಡಿನ ಉದ್ದವನ್ನು ಹೇಗೆ ಕಂಡುಹಿಡಿಯಬಹುದು?
  - ದೊಡ್ಡ ನೂಲಿನ ಉದ್ದದಿಂದ ತುಂಡು ಮಾಡಿ ತೆಗೆದ ನೂಲಿನ ಉದ್ದವನ್ನು ಕಳೆಯಬೇಕು.

ಅಂದರೆ, 16 ಸೆಂಟಿಮೀಟರ್‌ನಿಂದ

8 ಸೆಂಟಿಮೀಟರ್ 6 ಮಿಲ್ಲಿಮೀಟರನ್ನು ಕಳೆಯಬೇಕು.

ಅಳತೆಗಳನ್ನು ಮಿಲ್ಲಿಮೀಟರ್‌ನಲ್ಲಿ ಮಾಡಿದರೆ

| | | |
|---|---|---|
| 16 ಸೆ.ಮೀ | = | 160 ಮಿಲ್ಲಿಮೀಟರ್ − |
| 8 ಸೆ.ಮೀ 6 ಮಿ.ಮೀ | = | 86 ಮಿಲ್ಲಿಮೀಟರ್ |
| | | 74 ಮಿಲ್ಲಿಮೀಟರ್ |





74 ಮಿಲ್ಲಿಮೀಟರ್ = 7 ಸೆಂಟಿಮೀಟರ್ + 4 ಮಿಲ್ಲಿಮೀಟರ್


| | | |
|---|---|---|
| 16 ಸೆ.ಮೀ | = | 15 ಸೆ.ಮೀ. + 10ಮಿ.ಮೀ − |
| | | 8 ಸೆ.ಮೀ + 6 ಮಿ.ಮೀ |
| | | 7 ಸೆ.ಮೀ + 4 ಮಿ.ಮೀ |

ಎರಡನೆಯ ತುಂಡಿನ ಉದ್ದ ☐ ಸೆಂಟಿಮೀಟರ್ ☐ ಮಿಲ್ಲಿಮೀಟರ್

## ಆಕೃತಿಗಳು

■ ಮಡಲ ಕಡ್ಡಿಗಳನ್ನುಪಯೋಗಿಸಿ ಬಂಧೂರ ತಯಾರಿಸಿದ ವಿವಿಧ ಆಕೃತಿಗಳನ್ನು ನೋಡಿರಿ.










ಪ್ರತಿಯೊಂದು ಆಕೃತಿಯನ್ನು ತಯಾರಿಸಲು ಬಂಧೂರ ಉಪಯೋಗಿಸಿದ ಮಡಲಕಡ್ಡಿಯ ಒಟ್ಟು ಉದ್ದವೆಷ್ಟು?

A ....... ಸೆ.ಮೀ. ....... ಮಿ.ಮೀ.

B ....... ಸೆ.ಮೀ....... ಮಿ.ಮೀ.

C ....... ಸೆ.ಮೀ ....... ಮಿ.ಮೀ.

ಕಡ್ಡಿಗಳ ಉದ್ದಗಳೊಳಗಿನ ವ್ಯತ್ಯಾಸವೆಷ್ಟು?

C ಮತ್ತು A ತಮ್ಮೊಳಗೆ

..... ಸೆ.ಮೀ. ..... ಮಿ.ಮೀ

B ಮತ್ತು A ತಮ್ಮೊಳಗೆ

..... ಸೆ.ಮೀ. ..... ಮಿ.ಮೀ.

B ಮತ್ತು C ತಮ್ಮೊಳಗೆ

..... ಸೆ.ಮೀ. ..... ಮಿ.ಮೀ

? ಟೀಚರು ಕರಿಹಲಗೆಯಲ್ಲಿ 10 ಸೆಂಟಿಮೀಟರ್ 3 ಮಿಲ್ಲಿಮೀಟರ್ ಉದ್ದವಿರುವ ಇನ್ನೊಂದು ಗೆರೆ ಎಳೆದರು. ಅದನ್ನು ಮುಂದುವರಿಸಿಕೊಂಡು ಜೋನಿ 8 ಸೆಂಟಿಮೀಟರ್ 8 ಮಿಲ್ಲಿಮೀಟರ್‌ನ ಒಂದು ಗೆರೆಯನ್ನು ಎಳೆದನು. ಈಗ ಗೆರೆಯ ಒಟ್ಟು ಉದ್ದವೆಷ್ಟು?



? ರಮ್ಲ ತನ್ನ ರಿಬ್ಬನ್‌ನ್ನು ಎರಡಾಗಿ ತುಂಡು ಮಾಡಿದಳು. ಒಂದು ತುಂಡಿನ ಉದ್ದ 30 ಸೆಂಟಿಮೀಟರ್ 8 ಮಿಲ್ಲಿಮೀಟರ್. ಎರಡನೇ ತುಂಡಿನ ಉದ್ದ 34 ಸೆಂಟಿಮೀಟರ್ 2 ಮಿಲ್ಲಿಮೀಟರ್ ಆಗಿದೆ. ಹಾಗಾದರೆ ರಿಬ್ಬನ್‌ಗೆ ಒಟ್ಟು ಎಷ್ಟು ಉದ್ದವಿತ್ತು?

? ಮಳೆ ಮಾಪನದಲ್ಲಿ ಸೋಮವಾರ 6 ಸೆಂಟಿಮೀಟರ್ 8 ಮಿಲ್ಲಿ ಮೀಟರ್ ಮಂಗಳವಾರ 6 ಸೆಂಟಿಮೀಟರ್ 4 ಮಿಲ್ಲಿಮೀಟರ್ ಮಳೆ ಲಭಿಸಿತೆಂದು ದಾಖಲಾಯಿತು. ಎರಡು ದಿನಗಳಲ್ಲಿ ಸೇರಿ ಒಟ್ಟು ಎಷ್ಟು ಮಳೆ ಲಭಿಸಿತು?


? ಮುತ್ತಿನ ಮಾಲೆಯನ್ನು ತಯಾರಿಸಲು ಬೇಕಾಗಿ ಜಲಜ 96 ಸೆಂಟಿಮೀಟರ್ ಉದ್ದವಿರುವ ಒಂದು ನೂಲನ್ನು ಎರಡು ತುಂಡುಗಳಾಗಿ ಮಾಡಿದಳು. ಅದರಲ್ಲಿ ಒಂದರ ಉದ್ದ 40 ಸೆಂಟಿಮೀಟರ್ 8 ಮಿಲ್ಲಿಮೀಟರ್ ಆಗಿತ್ತು. ಹಾಗಾದರೆ ಎರಡನೇ ತುಂಡಿನ ಉದ್ದವೆಷ್ಟು? ಎರಡು ತುಂಡುಗಳೊಳಗಿನ ಉದ್ದಗಳ ವ್ಯತ್ಯಾಸವೆಷ್ಟು?

? 50 ಸೆಂಟಿಮೀಟರ್ ಉದ್ದವಿರುವ ಒಂದು ಸ್ಕೇಲು ನೆಲದಲ್ಲಿ ಬಿದ್ದು ಎರಡು ತುಂಡುಗಳಾದುವು. ಅದರಲ್ಲಿ ಒಂದರ ಉದ್ದ 23 ಸೆಂಟಿಮೀಟರ್ 6 ಮಿಲ್ಲಿಮೀಟರ್ ಆಗಿದ್ದರೆ, ಎರಡನೆಯದರ ಉದ್ದವೆಷ್ಟು?

? 72 ಸೆಂಟಿಮೀಟರ್ ಎತ್ತರವಿರುವ ಒಂದು ಪಾತ್ರೆಯಲ್ಲಿ ಈಗ 53 ಸೆಂಟಿಮೀಟರ್ 4 ಮಿಲ್ಲಿಮೀಟರ್ ಎತ್ತರದಲ್ಲಿ ನೀರಿದೆ. ಹಾಗಾದರೆ ನೀರು ಇಲ್ಲದ ಭಾಗದ ಎತ್ತರವೆಷ್ಟು?

## ಸಾವಿರ ಮೀಟರ್

■ ಮೀನ ಮತ್ತು ಮೇರಿ ಬೆಳಗ್ಗೆ ನಡೆಯಲು ಶಾಲಾ ಮೈದಾನಕ್ಕೆ ತಲುಪಿದರು. ಮೈದಾನದಲ್ಲಿ ಒಂದು ಸುತ್ತು ನಡೆದರೆ 150 ಮೀಟರ್ ಪೂರ್ತಿಯಾಗುತ್ತದೆ.




? ಒಬ್ಬೊಬ್ಬರು ಎಷ್ಟು ಮೀಟರ್ ನಡೆದರು?

ಮೀನ ☐


ಮೇರಿ ☐

? ಸಾವಿರ ಮೀಟರ್ ಪೂರ್ತಿಯಾಗಬೇಕಿದ್ದರೆ ಪ್ರತಿಯೊಬ್ಬರೂ ಇನ್ನು ಎಷ್ಟು ಮೀಟರ್ ನಡೆಯಬೇಕು?

ಮೀನ ☐ ಮೇರಿ ☐

## ವಾರ್ಷಿಕ ಆಚರಣೆ

■ ಚೆರುಮೂಕ್ಕ್ ಎಲ್.ಪಿ. ಶಾಲೆಯು ತನ್ನ 90ನೇ ವಾರ್ಷಿಕವನ್ನು ಆಚರಿಸುತ್ತಿದೆ. ಪಿ.ಟಿ.ಎ. ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಶಾಲಾ ಗೇಟಿನಿಂದ ಆರಂಭಿಸಿ 1000 ಮೀಟರ್ ಉದ್ದದ ತೋರಣ ಕಟ್ಟಲು ತೀರ್ಮಾನಿಸಲಾಯಿತು.




**ನಾನು ತಿಳಿದ ವಿಚಾರ**

| | |
|---|---|
| 100 ಸೆಂಟಿ ಮೀಟರ್ | = |
| 1000 ಮೀಟರ್ | = |




❓ ನಿಮ್ಮ ತರಗತಿಯಲ್ಲಿ ಒಂದು ಕಿಲೋ ಮೀಟರ್‌ಗಿಂತಲೂ ಹೆಚ್ಚು ದೂರ ನಡೆದು ಬರುವವರು ಯಾರು ಯಾರು?

❓ ಶಾಲೆಯಿಂದ ಪಂಚಾಯತು ಆಫೀಸಿಗಿರುವ ಅಂದಾಜು ದೂರವೆಷ್ಟು?

❓ ಶಾಲೆಯ ಒಂದು ಕಿಲೋಮೀಟರ್ ವ್ಯಾಪ್ತಿಯೊಳಗಿರುವ ಪ್ರಧಾನ ಸಂಸ್ಥೆಗಳು ಯಾವುವು?

## ಜಲ ಸಂಗ್ರಹಾಗಾರ

ಪೂಮನ ಗ್ರಾಮ ಪಂಚಾಯತು ಊರವರ ಸಹಾಯದೊಂದಿಗೆ ಶಾಲೆಗೆ ಕುಡಿಯುವ ನೀರಿಗಾಗಿ ಜಲಸಂಗ್ರಹಾಗಾರದಿಂದ ಪೈಪನ್ನು ಹಾಕಿದರು. ಒಂದನೇ ದಿನ 1 ಕಿಲೋ ಮೀಟರ್ 800 ಮೀಟರ್ ಮತ್ತು ಎರಡನೆ ದಿನ 1 ಕಿಲೋಮೀಟರ್ 500 ಮೀಟರ್ ಪೈಪು ಹಾಕಿದರು. ಎರಡು ದಿನಗಳಲ್ಲಿ ಒಟ್ಟು ಎಷ್ಟು ಮೀಟರ್ ಪೈಪು ಹಾಕಿದರು?

- ಹೇಗೆ ಕಂಡುಹಿಡಿಯಬಹುದು? ಯಾವ ಯಾವ ಮಾಹಿತಿಗಳನ್ನು ನೀಡಲಾಗಿದೆ?

  ಒಂದನೇ ದಿನ ಹಾಕಿದ್ದು 1 ಕಿ.ಮೀ. 800 ಮೀ.

  ಎರಡನೇ ದಿನ ಹಾಕಿದ್ದು .............. ಕಿ.ಮೀ................ ಮೀ.

ಹಾಗಾದರೆ ಪೈಪಿನ ಒಟ್ಟು ಉದ್ದ

| | | | |
|---|---|---|---|
| | 1 ಕಿ.ಮೀ. | 800 ಮೀ | + |
| | 1ಕಿ.ಮೀ. | 500 ಮೀ | |
| ಒಟ್ಟು | 2 ಕಿ.ಮೀ. | 1300 ಮೀ | |




1300 ಮೀ = 1 ಕಿ.ಮೀ. 300 ಮೀ

2 ಕಿ.ಮೀ. + 1 ಕಿ.ಮೀ. + 300 ಮೀ = 3 ಕಿ.ಮೀ. 300 ಮೀ.

## ಕಡಿಮೆಯಾಗುವ ದೂರ

ಪೇಟೆಯಿಂದ ಶಾಲೆಗಿರುವ 9 ಕಿಲೋ ಮೀಟರ್ ರಸ್ತೆಗೆ ಡಾಮರು ಹಾಕುತ್ತಿದ್ದಾರೆ. ನಿನ್ನೆಯವರೆಗೆ 4 ಕಿಲೋಮೀಟರ್ 300 ಮೀಟರ್ ಡಾಮರು ಹಾಕಲಾಯಿತು. ಇನ್ನು ಎಷ್ಟು ದೂರ ಡಾಮರು ಹಾಕಲು ಬಾಕಿ ಇದೆ?

ಯಾವ ಯಾವ ವಿವರಗಳನ್ನು ಕೊಡಲಾಗಿದೆ?

- ರಸ್ತೆಯ ಒಟ್ಟು ಉದ್ದ ______
- ಡಾಮರು ಹಾಕಿದ ರಸ್ತೆಯ ಉದ್ದ ______
- ಇನ್ನು ಡಾಮರು ಹಾಕಲು ಬಾಕಿಯಿರುವ ರಸ್ತೆಯ ಉದ್ದವನ್ನು ಕಂಡುಹಿಡಿಯಬೇಕು.
- ಒಟ್ಟು ದೂರದಿಂದ ಡಾಮರು ಹಾಕಿದ ಭಾಗದ ಉದ್ದವನ್ನು ಕಡಿಮೆಗೊಳಿಸಬೇಕು.

ಅಂದರೆ,

9 ಕಿಲೋ ಮೀಟರ್ −
4 ಕಿಲೋ ಮೀಟರ್ 300 ಮೀಟರ್

ಇದನ್ನು ಮೀಟರ್‌ನಲ್ಲಿ ಮಾಡಿದರೆ

9000 ಮೀಟರ್ −
4300 ಮೀಟರ್
4700 ಮೀಟರ್

4700 ಮೀಟರ್ = 4000 ಮೀಟರ್ + 700 ಮೀಟರ್
= 4 ಕಿಲೋ ಮೀಟರ್ + 700 ಮೀಟರ್



ಇನ್ನೊಂದು ರೀತಿಯನ್ನು ನೋಡೋಣ.

| | | |
|---|---|---|
| 9 ಕಿಲೋ ಮೀಟರ್ | = | 8 ಕಿಲೋ ಮೀಟರ್+1000 ಮೀಟರ್ |
| 4 ಕಿಲೋ ಮೀಟರ್ 300 ಮೀಟರ್ | = | 4 ಕಿಲೋ ಮೀಟರ್+300 ಮೀಟರ್ |
| | | 4 ಕಿಲೋ ಮೀಟರ್+700 ಮೀಟರ್ |
| ಅಂದರೆ, ಬಾಕಿ ಉಳಿದ ಭಾಗ | = | 4 ಕಿಲೋ ಮೀಟರ್ 700 ಮೀಟರ್ |



? ವಿಜ್ಞಾನೋತ್ಸವದಲ್ಲಿ ಭಾಗವಹಿಸಲು ಪೂಮನ ಶಾಲೆಯ ಮಕ್ಕಳು ಮೂರುವರೆ ಕಿಲೋಮೀಟರ್ ಬಸ್ಸಿನಲ್ಲಿ ಮತ್ತು 500 ಮೀಟರ್ ನಡೆದುಕೊಂಡು ಹೋದರು. ಅವರು ಸಂಚರಿಸಿದ ದೂರ ಎಷ್ಟು ಮೀಟರ್ ಆಗಿದೆ? ____ ಕಿಲೋಮೀಟರ್‌ನಲ್ಲಾದರೆ ____

? ರಾಜು 16 ಕಿಲೋ ಮೀಟರ್ ಬಸ್ಸಿನಲ್ಲೂ, 175 ಕಿಲೋಮೀಟರ್ ರೈಲಿನಲ್ಲೂ ಪ್ರಯಾಣಿಸಿ ಶೊರ್ನೂರಿಗೆ ತಲುಪಿದನು. ಇವನು ಎಷ್ಟು ಕಿಲೋಮೀಟರ್ ಪ್ರಯಾಣ ಮಾಡಿದನು?

? ಅಬು ದಿನವೂ ಬೆಳಗ್ಗೆ ಮತ್ತು ಸಂಜೆ 8000 ಮೀಟರ್ ದೂರ ನಡೆಯುತ್ತಾನೆ. ಜನವರಿ ತಿಂಗಳಲ್ಲಿ ಅವನು ಒಟ್ಟು ಎಷ್ಟು ಕಿಲೋಮೀಟರ್ ದೂರ ನಡೆದಿರಬಹುದು?

? ಶ್ಯಾಮಳ 800 ಮೀಟರ್, ಮೋಳಿ 750 ಮೀಟರ್ ಮತ್ತು ಮುಬೀನ 600 ಮೀಟರ್ ದೂರ ನಡೆದು ಶಾಲೆಗೆ ತಲುಪುವರು. ಶಾಲೆಗೆ ಬರಲು ಮತ್ತು ಹಿಂತಿರುಗಿ ಹೋಗಲು ಪ್ರತಿಯೊಬ್ಬರು ಎಷ್ಟು ಮೀಟರ್ ದೂರ ನಡೆಯುತ್ತಾರೆ? ಇದನ್ನು ಕಿಲೋಮೀಟರ್ ಮತ್ತು ಮೀಟರ್‌ಗಳಲ್ಲಿ ಹೇಳಬಹುದೇ?


? 6 ಕಿಲೋ ಮೀಟರ್ ಉದ್ದವಿರುವ ಒಂದು ತೋಡಿನ ಎರಡು ಬದಿಗಳನ್ನು ಕಲ್ಲಿನಿಂದ ಕಟ್ಟಲಾಗುತ್ತದೆ. ಇದರ ಒಂದು ಬದಿಯನ್ನು 3 ಕಿಲೋ ಮೀಟರ್ 650 ಮೀಟರ್ ಮತ್ತು ಇನ್ನೊಂದು ಬದಿಯನ್ನು 4 ಕಿಲೋ ಮೀಟರ್ 50 ಮೀಟರ್ ಕಟ್ಟಿಯಾಯಿತು. ಇನ್ನು ಎರಡು ಬದಿಗಳಲ್ಲೂ ಕಟ್ಟಲು ಬಾಕಿಯಿರುವ ಭಾಗದ ಉದ್ದವೆಷ್ಟು?

? ಕುಡಿಯುವ ನೀರಿನ ಯೋಜನೆಯ ಭಾಗವಾಗಿ 9 ಕಿಲೋಮೀಟರ್ 500 ಮೀಟರ್ ದೂರ ಪೈಪು ಹಾಕಬೇಕಾಗಿರುವಲ್ಲಿ 7 ಕಿಲೋ ಮೀಟರ್ 600 ಮೀಟರ್ ಕೆಲಸ ಪೂರ್ತಿಯಾಯಿತು. ಇನ್ನು ಎಷ್ಟು ದೂರ ಪೈಪು ಹಾಕಿದರೆ ಯೋಜನೆ ಪೂರ್ತಿಯಾಗಬಹುದು?

? 8 ಕಿಲೋಮೀಟರ್ 200 ಮೀಟರ್ ದೂರದಲ್ಲಿರುವ ಫ್ಯಾಕ್ಟರಿಯ 2 ಕಿಲೋಮೀಟರ್ ದೂರವನ್ನು ಬಿಟ್ಟು ಉಳಿದ ಭಾಗದಲ್ಲಿ ವಿದ್ಯುತ್ ಸಂಪರ್ಕ ಒದಗಿಸಲಾಯಿತು. ಹಾಗಾದರೆ ಎಷ್ಟು ದೂರದವರೆಗೆ ವಿದ್ಯುತ್ ಸಂಪರ್ಕ ಒದಗಿಸಲಾಯಿತು?

## ಎಷ್ಟು ದೂರ

- ತಿರುವನಂತಪುರದಿಂದ ವಿವಿಧ ರೈಲ್ವೆಸ್ಟೇಷನ್‌ಗಳಿಗಿರುವ ದೂರವನ್ನು ನೋಡಿರಿ.



| | |
|---|---|
| ತಿರುವನಂತಪುರ | 0 ಕಿಲೋ ಮೀಟರ್ |
| ಕೊಲ್ಲಂ | 65 ಕಿಲೋ ಮೀಟರ್ |
| ಕೋಟ್ಟಯಂ | 161 ಕಿಲೋ ಮೀಟರ್ |
| ಶೊರ್ನೂರ್ | 327 ಕಿಲೋ ಮೀಟರ್ |
| ಕೋಝಿಕ್ಕೋಡ್ | 414 ಕಿಲೋ ಮೀಟರ್ |
| ಕಾಸರಗೋಡು | 589 ಕಿಲೋ ಮೀಟರ್ |

- ತಿರುವನಂತಪುರದಿಂದ ಕಾಸರಗೋಡಿಗೆ ಎಷ್ಟು ಕಿಲೋಮೀಟರ್ ದೂರವಿದೆ? ______
- ಕೋಟ್ಟಯಂನಿಂದ ಪ್ರಯಾಣಿಸುವವನು ಕೋಝಿಕ್ಕೋಡ್ ತಲುಪಲು ಎಷ್ಟು ಕಿಲೋ ಮೀಟರ್ ಪ್ರಯಾಣಿಸಬೇಕು? ______
- ಕೋಟ್ಟಯಂನಿಂದ ಶೊರ್ನೂರ್‌ಗಿರುವ ದಾರಿಯಲ್ಲಿ 59 ಕಿಲೋ ಮೀಟರ್ ಪ್ರಯಾಣಿಸಿದರೆ ಎರ್ನಾಕುಳಂ ತಲುಪಬಹುದು. ಹಾಗಾದರೆ ತಿರುವನಂತಪುರದಿಂದ ಎರ್ನಾಕುಳಂಗೆ ತಲುಪಲು ಎಷ್ಟು ಕಿಲೋಮೀಟರ್ ಪ್ರಯಾಣಿಸಬೇಕು? ______
- ಕಾಸರಗೋಡಿನಿಂದ ಹೊರಡುವ ರೈಲು ಕೊಲ್ಲಂಗೆ ತಲುಪಲು ಎಷ್ಟು ಕಿಲೋಮೀಟರ್ ಸಂಚರಿಸಬೇಕು? ______
- ಎರ್ನಾಕುಳಂನಿಂದ ಕೊಲ್ಲಂ ಮತ್ತು ಕೋಝಿಕ್ಕೋಡು ಇವುಗಳಲ್ಲಿ ಎಲ್ಲಿಗೆ ಹೆಚ್ಚು ದೂರ ಇರುವುದು? ______

## ಕುಡಿಯುವ ನೀರು

- ಪೂಮನ ಕುಡಿಯುವ ನೀರು ಯೋಜನೆಯಿಂದ 5 ಪ್ರದೇಶಗಳಿಗೆ ನೀರು ತಲುಪಿಸಲಾಗುತ್ತದೆ. ಇದಕ್ಕಾಗಿ ಜಲಸಂಗ್ರಹಾಗಾರದಿಂದ ಕುನ್ನುಮ್ಮಲ್ ಪ್ರದೇಶಕ್ಕೆ 360 ಮೀಟರ್ ಅಲ್ಲಿಂದ ಆನೆಕ್ಕೆರೆಗೆ 630 ಮೀಟರ್, ಅಲ್ಲಿಂದ ಚಿತ್ತಾಣಿಗೆ 440 ಮೀಟರ್ ಪೈಪು ಹಾಕಲಾಯಿತು. ಚಿತ್ತಾಣಿಯಿಂದ ಕೋಲಗಕ್ಕೆ 720 ಮೀಟರ್ ಅಲ್ಲಿಂದ ಮುತ್ತುಮಲೆಗೆ 850 ಮೀಟರ್ ಪೈಪನ್ನು ಹಾಕಲಾಯಿತು.

? ಒಟ್ಟು ಹಾಕಿದ ಪೈಪುಗಳ ಉದ್ದ ಎಷ್ಟು ಮೀಟರ್?

? ಇದು ಎಷ್ಟು ಕಿಲೋಮೀಟರ್ ಆಗಿದೆ?


? ಒಂದು ಮೀಟರ್ ಪೈಪು ಹಾಕಲು 69 ರೂಪಾಯಿ ಕೂಲಿಯಾದರೆ ಪ್ರತಿಯೊಂದು ಸ್ಥಳಕ್ಕೂ ಪೈಪು ಹಾಕಲು, ಕೂಲಿಯ ಭಾಗವಾಗಿ ಎಷ್ಟು ಹಣ ಖರ್ಚಾಯಿತು? ಒಟ್ಟು ಎಷ್ಟು ಹಣ ಖರ್ಚಾಯಿತು?



| ನಾನು ನನ್ನ ಕುರಿತು | ಹೌದು | ಅಲ್ಲ |
|---|---|---|
| ಏನನ್ನು ಕಂಡುಹಿಡಿಯಬೇಕೆಂದು ತಿಳಿಯಿತು | | |
| ಸಮಸ್ಯೆ ಪರಿಹಾರಕ್ಕೆ ಯಾವ ಯಾವ ಕ್ರಿಯೆಗಳನ್ನು ಮಾಡಿದ್ದೇನೆಂದು ಕಂಡುಕೊಂಡಿದ್ದೇನೆ. | | |
| ಸರಿಯಾದ ದಾರಿಯಲ್ಲಿ ಸರಿಯಾದ ಉತ್ತರಕ್ಕೆ ತಲುಪಿದೆನು. | | |
| ಉತ್ತರವನ್ನು ಕಂಡುಹಿಡಿದ ರೀತಿಯನ್ನು ವಿವರಿಸಲು ಸಾಧ್ಯವಾಯಿತು. | | |

## ಬೆಳೆ ಕೊಯ್ಲು

■ ಶಾಲೆಯಲ್ಲಿ ಹಸಿರುಕ್ಲಬ್‌ನ ಮೂಲಕ ಓಣಂ ಹಬ್ಬದ ಪ್ರಯುಕ್ತ ತರಕಾರಿ ಕೊಯ್ಲನ್ನು ಮಾಡಲಾಯಿತು.




**ನಾನು ತಿಳಿದ ವಿಚಾರ**

1000 ಗ್ರಾಂ =
100 ಕಿಲೋಗ್ರಾಂ =

ಬೆಳೆಸಿದ ಇತರ ತರಕಾರಿಗಳ ಅಳತೆ ನೋಡಿರಿ.
ಪ್ರತಿಯೊಂದು ವಿಧದ ತರಕಾರಿಗಳು ಒಂದೊಂದು ಕ್ವಿಂಟಾಲ್ ಆಗಬೇಕಾದರೆ ಇನ್ನು ಎಷ್ಟು ಕಿಲೋ ಗ್ರಾಂ ಬೇಕು?

| ತರಕಾರಿ | ಕಿಲೋಗ್ರಾಂ | 1 ಕ್ವಿಂಟಾಲ್ ಆಗಲು |
|---|---|---|
| ಟೊಮೆಟೊ | 72 ಕಿಲೋ ಗ್ರಾಂ | 28 ಕಿಲೋ ಗ್ರಾಂ |
| ಸೌತೆ | 86 ಕಿಲೋ ಗ್ರಾಂ | |
| ಹಾಗಲ ಕಾಯಿ | 63 ಕಿಲೋ ಗ್ರಾಂ | |
| ನೇಂದ್ರ ಬಾಳೆಕಾಯಿ | 90 ಕಿಲೋ ಗ್ರಾಂ | |
| ಅಲಸಂಡೆ | 35 ಕಿಲೋ ಗ್ರಾಂ | |

## ಓಣಂ ಔತಣ

ಓಣಂ ಔತಣಕ್ಕೆ ಹಸಿರುಕ್ಲಬ್‌ನವರು ತರಕಾರಿ ಕೊಟ್ಟರು.

| ತರಕಾರಿ | ಕಿಲೋಗ್ರಾಂ |
|---|---|
| ಟೊಮೆಟೊ | 15 |
| ಸೌತೆ | 10 |
| ಹಾಗಲಕಾಯಿ | 5 |
| ಚೀನಿಕಾಯಿ | 10 |
| ನೇಂದ್ರ ಬಾಳೆಕಾಯಿ | 25 |
| ಅಲಸಂಡೆ | 15 |

- ಒಟ್ಟು ಎಷ್ಟು ಕಿಲೋಗ್ರಾಂ ತರಕಾರಿ ಕೊಟ್ಟರು?
- ಪಟ್ಟಿಯಲ್ಲಿ ಕೊಟ್ಟಿರುವ 3 ತರಕಾರಿಗಳಲ್ಲಿ ಈಗ ಇರುವ ಅಳತೆಯ ಇಮ್ಮಡಿ ಖರೀದಿಸಿದರೆ ಕ್ವಿಂಟಾಲ್ ಆಗುವುದು. ಅವು ಯಾವುವು?ಪ್ರತಿಯೊಂದು ಎಷ್ಟು ಕಿಲೋ ಗ್ರಾಂ ಆಗಿರಬಹುದು?

### ನಾನು ಕಂಡುಕೊಂಡದ್ದು

| | ತರಕಾರಿ | ಕಿಲೋಗ್ರಾಂ |
|---|---|---|
| 1 | | |
| 2 | | |
| 3 | | |

### ಗೆಳೆಯ ಕಂಡುಹಿಡಿದದ್ದು

| | ತರಕಾರಿ | ಕಿಲೋಗ್ರಾಂ |
|---|---|---|
| 1 | | |
| 2 | | |
| 3 | | |

- ಬಾಕಿ ಉಳಿದ ತರಕಾರಿಗಳನ್ನು ಕ್ಲಬ್ ಸದಸ್ಯರು ಮಾರಿದರು. ಟೊಮೆಟೊ, ಸೌತೆ, ಚೀನಿಕಾಯಿಗಳನ್ನು ಕಿಲೋಗ್ರಾಂಗೆ 15 ರೂಪಾಯಿಯಂತೆಯೂ, ಹಾಗಲಕಾಯಿ ಮತ್ತು ಅಲಸಂಡೆಯನ್ನು ಕಿಲೋ ಗ್ರಾಂಗೆ 23 ರೂಪಾಯಿಯಂತೆಯೂ, ನೇಂದ್ರ ಬಾಳೆಕಾಯಿಯನ್ನು ಕಿಲೋಗ್ರಾಂಗೆ 28 ರೂಪಾಯಿಯಂತೆಯೂ ಮಾರಿದರು.

? ಕ್ಲಬ್‌ಗೆ ತರಕಾರಿ ಮಾರಿದಾಗ ಒಟ್ಟು ಎಷ್ಟು ಹಣ ಲಭಿಸಿತು?

ಹೇಗೆ ಕಂಡುಹಿಡಿಯುವುದು?

? ನೀಡಿದ ಮಾಹಿತಿಗಳ ಪಟ್ಟಿ ತಯಾರಿಸಿದರೋ?

? ಪಟ್ಟಿಯಲ್ಲಿ ಯಾವೆಲ್ಲಾ ಮಾಹಿತಿಗಳು ಬೇಕು?

?

? ಹೆಚ್ಚು ಬೆಲೆ ಲಭಿಸಿದ ತರಕಾರಿ ಯಾವುದು? ☐ ಕಡಿಮೆಯೋ? ☐

## ಅಕ್ಕಿ ವಿತರಣೆ

■ 1 ಮತ್ತು 2ನೇ ತರಗತಿಗಳ 170 ಮಕ್ಕಳಿಗೆ 5 ಕಿಲೋಗ್ರಾಂನಂತೆ ಅಕ್ಕಿ ವಿತರಣೆ ಮಾಡಲಾಯಿತು..

? ಒಟ್ಟು ಎಷ್ಟು ಕಿಲೋಗ್ರಾಂ ಅಕ್ಕಿಯನ್ನು ವಿತರಿಸಲಾಯಿತು? ☐

? ಒಂದು ಗೋಣಿಯಲ್ಲಿ 50 ಕಿಲೋಗ್ರಾಂ ಅಕ್ಕಿ ಇರುವುದಾದರೆ ಎಷ್ಟು ಗೋಣಿ ಅಕ್ಕಿ ಬೇಕು? ☐

ಕ್ವಿಂಟಾಲ್ ಗೋಣಿಯಲ್ಲಿ ಅಕ್ಕಿ ಇರುತ್ತಿದ್ದರೆ? ☐ ಎಷ್ಟು ಕಿಲೋಗ್ರಾಂ ಅಕ್ಕಿ ಬಾಕಿ ಉಳಿಯಬಹುದು? ☐

■ 3 ಮತ್ತು 4ನೇ ತರಗತಿಗಳಿಗೆ 1 ಕ್ವಿಂಟಾಲ್ ಅಕ್ಕಿಯ 9 ಗೋಣಿಗಳೂ 50 ಕಿಲೋಗ್ರಾಂನ ಒಂದು ಗೋಣಿಯೂ ವಿತರಿಸಲಾಯಿತು.

? ಒಟ್ಟು ಎಷ್ಟು ಕಿಲೋಗ್ರಾಂ ಅಕ್ಕಿಯನ್ನು ವಿತರಿಸಲಾಯಿತು? ☐

? 3 ಮತ್ತು 4 ತರಗತಿಗಳಲ್ಲಿ ಒಟ್ಟು ಎಷ್ಟು ಮಕ್ಕಳಿದ್ದಾರೆ?

? ನಾಲ್ಕು ತರಗತಿಗಳಿಗೆ ಸೇರಿ ಎಷ್ಟು ಕಿಲೋಗ್ರಾಂ ಅಕ್ಕಿಯನ್ನು ವಿತರಿಸಲಾಯಿತು? ☐

? ಅಕ್ಕಿ ಕ್ವಿಂಟಾಲ್‌ನ ಗೋಣಿಯಲ್ಲಿರುವುದಾದರೆ ಎಷ್ಟು ಗೋಣಿ ಆಗಬಹುದು? ☐


## ಕೂಲಿ ಎಷ್ಟು

■ ಓಣಂ ಔತಣಕ್ಕಾಗಿ 350 ಕಿಲೋಗ್ರಾಂ ಅಕ್ಕಿ, 50 ಕಿಲೋಗ್ರಾಂ ಸಕ್ಕರೆಯನ್ನು ತರಲಾಯಿತು. ಇವುಗಳನ್ನು ಇಳಿಸಲು ಒಂದು ಕ್ವಿಂಟಾಲ್‌ಗೆ 15 ರೂಪಾಯಿ ಕೂಲಿಯಾದರೆ ಎಷ್ಟು ಹಣ ಕೊಡಬೇಕು?

9 ಕಿಲೋಮೀಟರ್ ಪ್ರಯಾಣಿಸಲು 225 ರೂಪಾಯಿ ಪ್ರಯಾಣವೆಚ್ಚ. ಹಾಗಾದರೆ ಒಂದು ಕಿಲೋಮೀಟರ್‌ಗೆ ಎಷ್ಟು ರೂಪಾಯಿಯಾಗಬಹುದು?

## ಅಡುಗೆ

ಅಡುಗೆಗಾಗಿ 1500 ಕಿಲೋಗ್ರಾಂ ಕಟ್ಟಿಗೆಯನ್ನು ಖರೀದಿಸಲಾಯಿತು.




- 1500 ಕಿಲೋಗ್ರಾಂ ಎಷ್ಟು ಕ್ವಿಂಟಾಲ್ ಆಗಿದೆ? ______
- 2 ಟನ್ ಆಗಬೇಕಿದ್ದರೆ ಇನ್ನು ಎಷ್ಟು ಕಿಲೋಗ್ರಾಂ ಕಟ್ಟಿಗೆ ಬೇಕು? ______

ಅದು ಎಷ್ಟು ಕ್ವಿಂಟಾಲ್ ಆಗಿದೆ? ______

**ನಾನು ತಿಳಿದ ವಿಚಾರ**

| | |
|---|---|
| 100 ಕಿಲೋಗ್ರಾಂ | = |
| 1000ಕಿಲೋಗ್ರಾಂ | = |
| 10 ಕ್ವಿಂಟಾಲ್ | = |


## ಪವನು

■ ರಾಮು ತನ್ನ ಮಗಳಿಗೆ ಖರೀದಿಸಿದ ಚಿನ್ನಾಭರಣಗಳ ಪಟ್ಟಿಯನ್ನು ಕೆಳಗೆ ಕೊಡಲಾಗಿದೆ.

| ಆಭರಣ | ಪವನು | ಗ್ರಾಂ |
|---|---|---|
| ಸರ | 3 ಪವನ್ | |
| ಬಳೆ | 4 ಪವನ್ | |
| ಉಂಗುರ | ಅರ್ಧ ಪವನ್ | |
| ಕಿವಿಯೋಲೆ | ಅರ್ಧ ಪವನ್ | |
| ನೆಕ್ಲೇಸ್ | 2 ಪವನ್ | |
| ಒಟ್ಟು | | |



## ಭತ್ತ ಸಂಗ್ರಹ



■ ಸೊಸೈಟಿ ಕಳೆದ 5 ದಿನಗಳಲ್ಲಾಗಿ ಸಂಗ್ರಹಿಸಿದ ಭತ್ತದ ಅಳತೆ ನೋಡಿರಿ.

ಮೊದಲ ದಿನ 1375 ಕಿಲೋಗ್ರಾಂ ಭತ್ತ ಸಂಗ್ರಹಿಸಿತು. ಎರಡನೇ ದಿನ ಸಂಗ್ರಹಿಸಿದ್ದು ಮೊದಲ ದಿನಕ್ಕಿಂತ 150 ಕಿಲೋಗ್ರಾಂ ಕಡಿಮೆಯಾಗಿತ್ತು. ಮೂರನೇ ದಿನ ಎರಡನೇ ದಿನಕ್ಕಿಂತ 325 ಕಿಲೋಗ್ರಾಂ ಕಡಿಮೆ ಮತ್ತು ನಾಲ್ಕನೇ ದಿನ ಮೂರನೇ ದಿನಕ್ಕಿಂತ 100 ಕಿಲೋಗ್ರಾಂ ಹೆಚ್ಚು ಆಗಿತ್ತು. 5 ದಿನಗಳಲ್ಲಿ ಒಟ್ಟು ಸಂಗ್ರಹಿಸಿರುವುದು 6000 ಕಿಲೋಗ್ರಾಂ ಆಗಿತ್ತು.

? ಪ್ರತಿಯೊಂದು ದಿನದಲ್ಲೂ ಸಂಗ್ರಹಿಸಿದ ಭತ್ತದ ಅಳತೆ ಕಿಲೋಗ್ರಾಂನಲ್ಲಿ ಬರೆಯಿರಿ.

| 1 | 2 | 3 | 4 | 5 |
|---|---|---|---|---|
| | | | | |

? ಒಟ್ಟು ಎಷ್ಟು ಟನ್ ಭತ್ತ ಸಂಗ್ರಹಿಸಲಾಯಿತು? ______

ಅದು ಎಷ್ಟು ಕ್ವಿಂಟಾಲ್? ______

? ಮೊದಲ ಎರಡು ದಿನಗಳಲ್ಲಿ ಎಷ್ಟು ಕ್ವಿಂಟಾಲ್ ಭತ್ತ ಸಂಗ್ರಹಿಸಲಾಯಿತು?

______

? 4 ನೇ ದಿನ ಸಂಗ್ರಹಿಸಿದ ಭತ್ತ ಎಷ್ಟು ಟನ್? ______

? 3 ನೇ ದಿನ ಸಂಗ್ರಹಿಸಿದ ಭತ್ತ 1 ಟನ್ ಆಗಬೇಕಿದ್ದರೆ ಇನ್ನು ಎಷ್ಟು ಕಿಲೋ ಗ್ರಾಂ ಭತ್ತ ಬೇಕು? ______

## ಪಾಕ ಶಾಲೆ

■ ಶಾಲೆಯ ಪಾಕಶಾಲೆಯನ್ನು ಪುನರ್ನಿರ್ಮಾಣ ಮಾಡಲಾಗುತ್ತದೆ. ಇದರ ನಿರ್ಮಾಣಕ್ಕೆ 6 ಟನ್ ಹೊೖಗೆ 2 ಟನ್ ಸಿಮೆಂಟು 3 ಟನ್ ಜಲ್ಲಿಯನ್ನೂ ಖರೀದಿಸಲಾಯಿತು.

? ಇವುಗಳಲ್ಲಿ ಪ್ರತಿಯೊಂದು ಎಷ್ಟು ಕಿಲೋಗ್ರಾಂ ಆಗಿದೆ?

ಹೊೖಗೆ ______ ಸಿಮೆಂಟು ______ ಜಲ್ಲಿ ______

? ಇವುಗಳನ್ನು ಕ್ವಿಂಟಾಲುಗಳಲ್ಲಿ ಹೇಳುವುದಾದರೆ?

ಹೊೖಗೆ ______ ಸಿಮೆಂಟು ______ ಜಲ್ಲಿ ______

- ಎರಡು ವಿಧದ ಕಬ್ಬಿಣಗಳನ್ನು ಕಾಂಕ್ರಿಟು ಮಾಡಲು ಖರೀದಿಸಿದರು. ಸಪೂರದ 3625 ಕಿಲೋಗ್ರಾಂ ಕಬ್ಬಿಣದ ಸರಳು ಮತ್ತು ತೋರದ 1375 ಕಿಲೋಗ್ರಾಂ ಕಬ್ಬಿಣದ ಸರಳನ್ನು ಖರೀದಿಸಲಾಯಿತು.

? ಒಟ್ಟು ಎಷ್ಟು ಟನ್ ಕಬ್ಬಿಣದ ಸರಳನ್ನು ಖರೀದಿಸಿದರು? ______

? ಎರಡು ವಿಧದ ಸರಳುಗಳೊಳಗಿರುವ ಭಾರವ್ಯತ್ಯಾಸವೆಷ್ಟು? ______

## ಕೃಷಿ ತೋಟ

■ ರಾಮುವಿನ ಕೃಷಿತೋಟದಿಂದ ಕಳೆದ ಎರಡು ವಾರಗಳಲ್ಲಿ ಕ್ರೊದ ತರಕಾರಿಗಳ ಭಾರವನ್ನು ಕಿಲೋಗ್ರಾಂಗಳಲ್ಲಿ ಕೆಳಗೆ ಕೊಡಲಾಗಿದೆ.

? ಪ್ರತಿಯೊಂದು ತರಕಾರಿಯ ಒಟ್ಟು ಭಾರವನ್ನು ಟನ್, ಕ್ವಿಂಟಾಲ್, ಕಿಲೋಗ್ರಾಂ ಎಂಬ ಕ್ರಮದಲ್ಲಿ ಬರೆದು ಪಟ್ಟಿ ಪೂರ್ತಿಗೊಳಿಸಿರಿ.

| ವಿಧಗಳು | 11/1/2015 ಕಿ.ಗ್ರಾಂ | 18/1/2015 (ಕಿ.ಗ್ರಾಂ) | ಒಟ್ಟು (ಕಿ.ಗ್ರಾಂ) | ಟನ್ | ಕ್ವಿಂಟಾಲ್ | ಕಿಲೋಗ್ರಾಂ |
|---|---|---|---|---|---|---|
| ಮರಗೆಣಸು | 980 | 1040 | | 2 | - | 20 |
| ನೇಂದ್ರ ಬಾಳೆಕಾಯಿ | 620 | 475 | | | | |
| ಸುವರ್ಣ ಗಡ್ಡೆ | 190 | 230 | | | 4 | |
| ಸೌತೆಕಾಯಿ | 530 | 470 | | | | |
| ಕಲ್ಲಂಗಡಿ | 680 | 705 | | | | |
| ಕ್ಯಾಬೇಜ್ | 240 | 320 | | | | 60 |

? ನೇಂದ್ರ ಬಾಳೆಕಾಯಿಗೆ ಕಿಲೋ ಒಂದಕ್ಕೆ 29 ರೂಪಾಯಿ ಬೆಲೆಯಾದರೆ ಒಟ್ಟು ಎಷ್ಟು ರೂಪಾಯಿ ಲಭಿಸಬಹುದು?

? ಕ್ಯಾಬೇಜ್ 4 ಗೋಣಿಗಳಲ್ಲಿ ಪ್ರತಿಯೊಂದು ಸಲವೂ ತುಂಬಿಸಿದರು. ಹಾಗಾದರೆ ಪ್ರತಿಯೊಂದು ಗೋಣಿಯಲ್ಲಿ ಎಷ್ಟು ಕಿಲೋಗ್ರಾಂ ಇರಬಹುದು?

? ಮೊದಲ ವಾರ ಮತ್ತು ಎರಡನೆಯ ವಾರ ಲಭಿಸಿದ ಮರಗೆಣಸಿನ ಅಳತೆಗಳ ವ್ಯತ್ಯಾಸ ಎಷ್ಟು?

## ವಾರ್ಷಿಕ

■ ಶಾಲಾ ವಾರ್ಷಿಕೋತ್ಸವದ ಭೋಜನಕ್ಕೆ ಬೇಕಾದ ವಸ್ತುಗಳನ್ನು ಹಳೆವಿದ್ಯಾರ್ಥಿಗಳು ನೀಡಿದರು. ಭೋಜನಕ್ಕೆ ಬೇಕಾಗಿ ಅವರು ಖರೀದಿಸಿದ ವಸ್ತುಗಳನ್ನು ನೋಡಿರಿ.

ಅಕ್ಕಿ .......................................... 825 ಕಿಲೋಗ್ರಾಂ
ಸಕ್ಕರೆ .......................................... 3 ಕ್ವಿಂಟಾಲ್
ತುಪ್ಪ .................................... 5 ಕಿಲೋ500 ಗ್ರಾಂ
ಗೋಡಂಬಿ .................................. 2 ಕಿಲೋಗ್ರಾಂ
ಒಣದ್ರಾಕ್ಷೆ ...................................... 500 ಗ್ರಾಂ

? 50 ಕಿಲೋಗ್ರಾಂ, 75 ಕಿಲೋಗ್ರಾಂ, 100 ಕಿಲೋಗ್ರಾಂ ಗೋಣಿಗಳಲ್ಲಾಗಿ ಅಕ್ಕಿ ಇದೆ. ಹಾಗಾದರೆ ಪ್ರತಿಯೊಂದು ಗೋಣಿ ಎಷ್ಟು ಸಂಖ್ಯೆಯಲ್ಲಿರಬಹುದು?

? ಅಕ್ಕಿ 1 ಟನ್ ಆಗಬೇಕಿದ್ದರೆ ಎಷ್ಟು ಕಿಲೋಗ್ರಾಂ ಇನ್ನು ಬೇಕು?

? ಸಕ್ಕರೆ ಎಷ್ಟು ಕಿಲೋಗ್ರಾಂ ಆಗಿದೆ?

? ಗೋಡಂಬಿ ಎಷ್ಟು ಗ್ರಾಂ ಇದೆ?

? ತುಪ್ಪ, ಗೋಡಂಬಿ, ಒಣದ್ರಾಕ್ಷೆ ಈ ಮೂರನ್ನು ಒಂದೇ ಚೀಲದಲ್ಲಿ ಕೊಡಲಾಗಿದೆ. ಹಾಗಾದರೆ ಚೀಲದ ಒಟ್ಟು ಭಾರವೆಷ್ಟು?



| ನಾನು ನನ್ನ ಕುರಿತು | ಹೌದು | ಅಲ್ಲ |
|---|---|---|
| ಏನನ್ನು ಕಂಡುಹಿಡಿಯಬೇಕೆಂದು ತಿಳಿಯಿತು. | | |
| ಉತ್ತರಕ್ಕೆ ತಲುಪಲು ಯಾವಯಾವ ಕ್ರಿಯೆಗಳನ್ನು ಮಾಡಬೇಕೆಂದು ಕಂಡುಕೊಂಡೆನು. | | |
| ಯೋಗ್ಯವಾದ ರೀತಿಯ ಮೂಲಕ ಸರಿಯಾದ ಉತ್ತರಕ್ಕೆ ತಲುಪಿದೆನು. | | |
| ಗ್ರಾಂ, ಕಿಲೋಗ್ರಾಂ, ಕ್ವಿಂಟಾಲ್, ಟನ್‌ಗಳೊಳಗಿನ ಸಂಬಂಧವನ್ನು ಸರಿಯಾಗಿ ಉಪಯೋಗಿಸಲು ಸಾಧ್ಯವಾಯಿತು. | | |
| ಉತ್ತರವನ್ನು ಕಂಡುಹಿಡಿದ ರೀತಿಯನ್ನು ಇತರರಿಗೆ ವಿವರಿಸಲು ಸಾಧ್ಯವಾಯಿತು. | | |

# 10

# ಮಾಹಿತಿ ಸಂಗ್ರಹ

## ರಾಷ್ಟ್ರೀಯ ಕ್ರೀಡಾಕೂಟ



- ಇದು ಯಾರ ಚಿತ್ರವಾಗಿದೆ?

2015 ರಲ್ಲಿ ಕೇರಳದಲ್ಲಿ ನಡೆದ ರಾಷ್ಟ್ರೀಯ ಕ್ರೀಡಾಕೂಟದ ಭಾಗ್ಯ ಚಿಹ್ನೆಯಾಗಿದೆ ಅಮ್ಮು.

ಈ ಕೆಳಗಿನ ಪಟ್ಟಿ ನೋಡಿರಿ.

ಕ್ರೀಡಾಕೂಟದ ಮೊದಲ ಐದು ಸ್ಥಾನಗಳನ್ನು ಗಳಿಸಿದ ತಂಡಗಳ ಪದಕಗಳ ಸಂಖ್ಯೆಗಳು ಕೆಳಗಿನ ಪಟ್ಟಿಯಲ್ಲಿದೆ.

| ನಂಬ್ರ | ತಂಡ | ಚಿನ್ನ | ಬೆಳ್ಳಿ | ಕಂಚು |
|---|---|---|---|---|
| 1 | ಸರ್ವೀಸಸ್ | 91 | 33 | 35 |
| 2 | ಕೇರಳ | 54 | 48 | 60 |
| 3 | ಹರಿಯಾನ | 40 | 40 | 27 |
| 4 | ಮಹಾರಾಷ್ಟ್ರ | 30 | 43 | 50 |
| 5 | ಪಂಜಾಬ್ | 27 | 34 | 32 |

? ಅತೀ ಹೆಚ್ಚು ಚಿನ್ನದ ಪದಕಗಳನ್ನು ಗಳಿಸಿದ ತಂಡ ಯಾವುದು?

? ಅತೀ ಹೆಚ್ಚು ಪದಕಗಳನ್ನು ಪಡೆದ ತಂಡ ಯಾವುದು? ಇಂತಹ ಇನ್ನೂ ಕೆಲವು ಪ್ರಶ್ನೆಗಳನ್ನು ತಯಾರಿಸಿರಿ.

- ಕೇರಳವು ಆಟೋಟ ವಿಭಾಗದಲ್ಲಿ ಹೆಚ್ಚು ಸಾಧನೆ ಮಾಡಿತು. ಆಟೋಟಗಳಲ್ಲಿ ಮೊದಲ ನಾಲ್ಕು ಸ್ಥಾನಗಳನ್ನು, ಗಳಿಸಿದ ತಂಡಗಳನ್ನು ಅಪ್ಪು ಪಟ್ಟಿ ಮಾಡಿರುವುದನ್ನು ನೋಡಿರಿ.

| ನಂಬ್ರ | ತಂಡ | ಚಿನ್ನ | ಬೆಳ್ಳಿ | ಕಂಚು |
|---|---|---|---|---|
| 1 | ಕೇರಳ | 9 | 10 | 8 |
| 2 | ಸರ್ವೀಸಸ್ | 7 | 1 | 5 |
| 3 | ಪಂಜಾಬ್ | 5 | 5 | 5 |
| 4 | ಉತ್ತರ ಪ್ರದೇಶ | 3 | 5 | 2 |

? ಐದಕ್ಕಿಂತ ಹೆಚ್ಚು ಚಿನ್ನದ ಪದಕಗಳನ್ನು ಗಳಿಸಿದ ತಂಡಗಳು ಯಾವುವು?

? ಚಿನ್ನದ ಪದಕಗಳಿಗಿಂತ ಹೆಚ್ಚು ಬೆಳ್ಳಿಯ ಪದಕಗಳನ್ನು ಪಡೆದ ತಂಡಗಳು ಯಾವುವು?

ಹೆಚ್ಚು ಪ್ರಶ್ನೆಗಳನ್ನು ತಯಾರಿಸುವಿರಲ್ಲವೇ?

## ಮೌಲ್ಯಮಾಪನ ಮಾಡೋಣ

■ ಗಣಿತ ಪರೀಕ್ಷೆಯಲ್ಲಿ ಅಪ್ಪುವಿನ ತರಗತಿಯ ಮಕ್ಕಳಿಗೆ ಲಭಿಸಿದ ಗ್ರೇಡನ್ನು ನೋಡಿರಿ.

| ನಂಬ್ರ | ಹೆಸರು | ಗ್ರೇಡ್ |
|---|---|---|
| 1 | ಅಪರ್ಣ | A |
| 2 | ಅಪ್ಪು | B |
| 3 | ಜೋನ್ | C |
| 4 | ಇಜಾಸ್ | C |
| 5 | ಮಿಥಿಲಾ | A |
| 6 | ಆದಿತ್ಯ | B |
| 7 | ಜೋಸ್ | B |
| 8 | ಇರ್ಫಾನ್ | B |
| 9 | ಲಿಸಿ | D |
| 10 | ಜಸ್ನ | C |

| ನಂಬ್ರ | ಹೆಸರು | ಗ್ರೇಡ್ |
|---|---|---|
| 11 | ಅಕ್ಷಯ | A |
| 12 | ಅಶ್ವತಿ | B |
| 13 | ತೀರ್ಥ | A |
| 14 | ಅಂಜು | B |
| 15 | ಸಾರಂಗ್ | B |
| 16 | ಅನುಜಿತ್ | C |
| 17 | ಮಹೇಶ | A |
| 18 | ಫಸ್ನಾ | B |
| 19 | ನಂದ | C |
| 20 | ಶ್ರೀ ಕುಟ್ಟನ್ | A |

? A ಗ್ರೇಡ್ ಸಿಕ್ಕಿದ ಮಕ್ಕಳ ಸಂಖ್ಯೆ ಎಷ್ಟು?

? B ಗ್ರೇಡ್ ಸಿಕ್ಕಿದ ಮಕ್ಕಳ ಸಂಖ್ಯೆ ಎಷ್ಟು?

? C ಗ್ರೇಡ್ ಸಿಕ್ಕಿದ ಮಕ್ಕಳ ಸಂಖ್ಯೆ ಎಷ್ಟು?

? D ಗ್ರೇಡ್ ಸಿಕ್ಕಿದ ಮಕ್ಕಳ ಸಂಖ್ಯೆ ಎಷ್ಟು?

ಪ್ರತಿಯೊಂದು ಗ್ರೇಡ್ ಸಿಕ್ಕಿದವರ ಸಂಖ್ಯೆಯನ್ನು ತೋರಿಸುವ ಪಟ್ಟಿ ತಯಾರಿಸಿರಿ.

| ಗ್ರೇಡ್ | ಮಕ್ಕಳ ಸಂಖ್ಯೆ |
|---|---|
| A | |
| B | |
| C | |
| D | |
| E | |

- B ಗ್ರೇಡ್ ಹಾಗೂ ಅದಕ್ಕಿಂತ ಹೆಚ್ಚು ಲಭಿಸಿದ ಮಕ್ಕಳೆಷ್ಟು?
- D ಗ್ರೇಡ್ ಹಾಗೂ ಅದಕ್ಕಿಂತ ಕಡಿಮೆ ಲಭಿಸಿದ ಮಕ್ಕಳೆಷ್ಟು?
- ಹೆಚ್ಚಿನ ಪ್ರಶ್ನೆಗಳನ್ನು ತಯಾರಿಸಿರಿ.

## ಯಾರು ಉತ್ತಮ?

ಅಪ್ಪುವಿನ ಹಾಗೂ ತೀರ್ಥಳ ಬೆಂಚುಗಳಲ್ಲಿರುವ ಮಕ್ಕಳಿಗೆ ಪ್ರತಿಯೊಂದು ವಿಷಯದಲ್ಲೂ ಲಭಿಸಿದ ಗ್ರೇಡನ್ನು ಕೆಳಗೆ ಕೊಡಲಾಗಿದೆ.

| ಹೆಸರು | ಕನ್ನಡ | ಇಂಗ್ಲೀಷ್ | ಪರಿಸರ | ಗಣಿತ |
|---|---|---|---|---|
| ಅಪ್ಪು | A | A | A | B |
| ಶ್ರೀಕುಟ್ಟನ್ | A | A | A | A |
| ಮಹೇಶ್ | A | B | B | A |
| ಸಾರಂಗ್ | A | A | B | B |
| ಜೋಸ್ | A | B | A | B |

| ಹೆಸರು | ಕನ್ನಡ | ಇಂಗ್ಲೀಷ್ | ಪರಿಸರ | ಗಣಿತ |
|---|---|---|---|---|
| ತೀರ್ಥ | A | A | A | A |
| ಆದಿರ | A | A | A | B |
| ಅಂಜು | A | B | A | A |
| ಹಸ್ನಾ | A | B | A | B |
| ಮಿಥಿಲ | A | A | A | A |

ಪಟ್ಟಿಗಳನ್ನು ಹೋಲಿಸಿರಿ.

- ಅಪ್ಪುವಿನ ಬೆಂಚಿನಲ್ಲಿ ಎಲ್ಲಾ ವಿಷಯಗಳಲ್ಲೂ A ಗ್ರೇಡ್ ಸಿಕ್ಕಿದವರು ಯಾರು?

? ತೀರ್ಥಳ ಬೆಂಚಿನಲ್ಲಿ ಯಾವ ಯಾವ ವಿಷಯಗಳಲ್ಲಿ ಎಲ್ಲಾ ಮಕ್ಕಳಿಗೆ A ಗ್ರೇಡ್ ಲಭಿಸಿದೆ?

? ಎಲ್ಲಾ ವಿಷಯಗಳಲ್ಲೂ A ಗ್ರೇಡ್ ಲಭಿಸಿದ ಮಕ್ಕಳು ಯಾರ ಬೆಂಚಿನಲ್ಲಿ ಹೆಚ್ಚು ಇದ್ದಾರೆ?

?

?

?

ನಿಮ್ಮ ಬೆಂಚಿನ ಮಕ್ಕಳಿಗೆ ಲಭಿಸಿದ ಗ್ರೇಡುಗಳನ್ನು ಪಟ್ಟಿಮಾಡಿ ಪ್ರಶ್ನೆಗಳನ್ನು ತಯಾರಿಸಿರಿ. ಅವುಗಳಿಗೆ ಉತ್ತರಗಳನ್ನು ಕಂಡುಹಿಡಿಯಿರಿ.

## ಕಲಿಕಾ ಪ್ರವಾಸ

■ ನಾಲ್ಕನೇ ತರಗತಿಯಿಂದ ಕಲಿಕಾ ಪ್ರವಾಸ ಹೋಗಲಿದ್ದಾರೆ. A ವಿಭಾಗದಿಂದ 18 ಮಕ್ಕಳೂ, Bಯಿಂದ 12 ಮಕ್ಕಳೂ C ಮತ್ತು D ವಿಭಾಗಗಳಿಂದ 15 ಮಕ್ಕಳಂತೆ ಪ್ರವಾಸ ಹೋದರು. ತರಗತಿಯ ವಿಭಾಗ ಮತ್ತು ಪ್ರವಾಸಕ್ಕೆ ಹೋದವರ ಸಂಖ್ಯೆಗಳನ್ನು ತೋರಿಸುವ ಪಟ್ಟಿಯನ್ನು ತಯಾರಿಸಿರಿ.

## ಪಾರ್ಕ್‌ನಲ್ಲಿ ಆಡೋಣ

■ ಅಪ್ಪು ಮತ್ತು ಗೆಳೆಯರು ಪಾರ್ಕಿಗೆ ತಲುಪಿದರು. ಎಲ್ಲಾ ಕಡೆಗಳಲ್ಲೂ ಮನೋಹರವಾದ ದೃಶ್ಯಗಳು.



ಪಾರ್ಕ್‌ನಲ್ಲಿ ನಿಮಗೆ ಏನೇನು ಕಾಣಿಸುತ್ತಿದೆ?
ಪ್ರತಿಯೊಂದು ಎಷ್ಟಿವೆ?
ಚಿತ್ರ ನೋಡಿ ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ಪಾರ್ಕ್‌ನಲ್ಲಿ ನಾನು ನೋಡಿದ್ದು | ಸಂಖ್ಯೆ |
|---|---|
| ಬಣ್ಣದ ಕೊಡೆಗಳು | |
| ಅಕ್ವೇರಿಯಂ | |
| ಉಯ್ಯಾಲೆ | |
| | |
| | |
| | |

## ಸಪ್ತವರ್ಣ !

- ತೀರ್ಥಳಿಗೆ ಪಾರ್ಕಿನಲ್ಲಿರುವ ಬಣ್ಣ ಬಣ್ಣದ ಕೊಡೆಗಳು ತುಂಬಾ ಇಷ್ಟವಾಯಿತು. ಅವುಗಳಲ್ಲಿ ಯಾವ ಯಾವ ಬಣ್ಣಗಳಿವೆ?



ಕಾಮನಬಿಲ್ಲು ನೋಡಿದಿರಲ್ಲವೇ.

ಎಷ್ಟು ಬಣ್ಣಗಳಿವೆ?

ಅದರಲ್ಲಿ ನಿಮಗೆ ತುಂಬಾ ಇಷ್ಟವಾದ ಬಣ್ಣ ಯಾವುದು?

ನಿಮ್ಮ ಗೆಳೆಯರಿಗೂ ಅದೇ ಬಣ್ಣ ಇಷ್ಟವೋ?

ನಾಫಿಯಾಳ ಕ್ಲಾಸಿನಲ್ಲಿ ಕಾಮನಬಿಲ್ಲಿನ ಪ್ರತಿಯೊಂದು ಬಣ್ಣವನ್ನು ಇಷ್ಟಪಡುವವರ ಸಂಖ್ಯೆಯನ್ನು ಕೆಳಗಿನ ಪಟ್ಟಿಯಲ್ಲಿ ನೀಡಲಾಗಿದೆ.

| ಬಣ್ಣಗಳು | ಸಂಖ್ಯೆ |
|---|---|
| V | 4 |
| I | 2 |
| B | 5 |
| G | 3 |
| Y | 4 |
| O | 3 |
| R | 4 |

ನಾಫಿಯಾಳ ತರಗತಿಯ ಹೆಚ್ಚಿನ ಮಕ್ಕಳು ಇಷ್ಟಪಡುವ ಬಣ್ಣ ಯಾವುದು?
ನಿಮ್ಮ ತರಗತಿಯಲ್ಲಿ ವಿವರ ಸಂಗ್ರಹ ಮಾಡಿ ಇದೇ ರೀತಿಯ ಪಟ್ಟಿಯನ್ನು ತಯಾರಿಸಿರಿ.



## ಗ್ರಂಥಾಲಯ ಸಂದರ್ಶನ

■ ಶಾಲೆಗೆ ಮರಳಿ ಬರುವ ದಾರಿಯಲ್ಲಿ ಅವರು ಪಿ.ಎನ್. ಪಣಿಕ್ಕರ್ ಸ್ಮಾರಕ ಗ್ರಂಥಾಲಯವನ್ನು ಸಂದರ್ಶಿಸಿದರು.



ಲೈಬ್ರರಿಯ ಪ್ರತಿಯೊಂದು ವಿಧದ ಪುಸ್ತಕಗಳ ಸಂಖ್ಯೆಯನ್ನು ತೋರಿಸುವ ಪಟ್ಟಿಯನ್ನು ಕೆಳಗೆ ಕೊಡಲಾಗಿದೆ. ಪಟ್ಟಿಯನ್ನು ಪೂರ್ತಿಗೊಳಿಸಿರಿ.


ಒಂದು ಪುಸ್ತಕದ ಚಿತ್ರ 100 ಪುಸ್ತಕಗಳನ್ನು ಸೂಚಿಸುತ್ತದೆ.

| ವಿಧ | ಸಂಖ್ಯೆಗಳನ್ನು ಸೂಚಿಸುವ ಚಿತ್ರ | ಒಟ್ಟು ಸಂಖ್ಯೆ |
|---|---|---|
| ಮಕ್ಕಳ ಸಾಹಿತ್ಯ |  | |
| ಕಥೆ |  | |
| ಕವಿತೆ |  | |
| ಕಾದಂಬರಿ |  | |
| ಜೀವನ ಚರಿತ್ರೆ |  | |


## ಸಂಖ್ಯೆ ಎಷ್ಟು?

■ ವೃತ್ತಗಳು, ತ್ರಿಕೋನಗಳು ಹಾಗೂ ಆಯತಗಳನ್ನು ಉಪಯೋಗಿಸಿ ರವಿಯು ರಚಿಸಿದ ಗಣಿತ ಬೋರ್ಡಿನಲ್ಲಿರುವ ಚಿತ್ರಗಳನ್ನು ನೋಡಿರಿ.


ಚಿತ್ರ 1



ಚಿತ್ರ 2



ಚಿತ್ರ 3






ಪ್ರತಿಯೊಂದು ಚಿತ್ರವನ್ನು ಸರಿಯಾಗಿ ನೋಡಿದಿರಲ್ಲವೇ? ಇನ್ನು ಕೆಳಗೆ ನೀಡಿರುವ ಪಟ್ಟಿಯಲ್ಲಿ ಪ್ರತಿಯೊಂದು ಆಕೃತಿಗಳು ಎಷ್ಟಿವೆ ಎಂದು ಬರೆದು ಪಟ್ಟಿಯನ್ನು ಪೂರ್ತಿಗೊಳಿಸಿರಿ.

| | ▭ | △ | ○ |
|---|---|---|---|
| ಚಿತ್ರ 1 | | | |
| ಚಿತ್ರ 2 | | | |
| ಚಿತ್ರ 3 | | | |
| ಒಟ್ಟು | | | |

## ಒಂದನೇ ತರಗತಿಯಲ್ಲಿ

■ ತಿರುಕುಳಂ ಪಂಚಾಯತಿನ 6 ಎಲ್.ಪಿ. ಶಾಲೆಗಳಲ್ಲಿ ಈ ವರ್ಷ ಒಂದನೇ ತರಗತಿಗೆ ಸೇರಿದ ಮಕ್ಕಳ ಸಂಖ್ಯೆಯನ್ನು ಕೆಳಗಿನ ಪಟ್ಟಿಯಲ್ಲಿ ನೀಡಲಾಗಿದೆ. (ಒಂದು ಮಗುವಿನ ಚಿತ್ರವು 10 ಮಕ್ಕಳನ್ನು ಸೂಚಿಸುವುದು)

| | ಗಂಡು ಮಕ್ಕಳು | ಹೆಣ್ಣು ಮಕ್ಕಳು |
|---|---|---|
| ಕೋಳಿಮಲೆ ಎಲ್.ಪಿ. ಶಾಲೆ |  |  |
| ವಡಪುರಂ ಎಲ್.ಪಿ. ಶಾಲೆ |  |  |
| ಮಾಮಲ್ಲಪುರಂ ಜಿ.ಎಲ್.ಪಿ. ಶಾಲೆ |  |  |
| ಪತ್ತನಾಕುಳಂ ಎಲ್.ಪಿ. ಶಾಲೆ |  |  |
| ಪಾಲತ್ತಿರ ಎಲ್.ಪಿ. ಶಾಲೆ |  |  |
| ತಿರುಮಲ ಜಿ.ಎಲ್.ಪಿ. ಶಾಲೆ |  |  |

? ಒಂದನೇ ತರಗತಿಯಲ್ಲಿರುವ ಮಕ್ಕಳ ಒಟ್ಟು ಸಂಖ್ಯೆ ಎಷ್ಟು? ☐

? ಗಂಡುಮಕ್ಕಳೋ ಅಥವಾ ಹೆಣ್ಣುಮಕ್ಕಳೋ ಹೆಚ್ಚು? ☐ ಎಷ್ಟು ಹೆಚ್ಚು? ☐

? ಒಂದನೇ ತರಗತಿಗೆ ಅತೀ ಹೆಚ್ಚು ಮಕ್ಕಳು ದಾಖಲಾದ ಶಾಲೆ ಯಾವುದು? ☐ ಎಷ್ಟು ಮಕ್ಕಳು? ☐ ಕಡಿಮೆಯೋ? ☐

■ ಒಂದನೇ ತರಗತಿಯ ಎಲ್ಲಾ ಮಕ್ಕಳಿಗೂ ಸ್ಲೇಟು ನೀಡಲು ಪಂಚಾಯತ್ ತೀರ್ಮಾನಿಸಿತು.

ಒಂದು ಸ್ಲೇಟಿನ ಚಿತ್ರವು 10 ಸ್ಲೇಟುಗಳನ್ನು ಸೂಚಿಸುವ ರೀತಿಯಲ್ಲಿ ಕೆಳಗಿನ ಪಟ್ಟಿಯಲ್ಲಿ 6 ಶಾಲೆಗಳಿಗೆ ಅಗತ್ಯವಾದ ಸ್ಲೇಟುಗಳ ಸಂಖ್ಯೆಯನ್ನು ಚಿತ್ರ ಬಿಡಿಸಿ ತೋರಿಸಿರಿ.


| ಶಾಲೆ | ಒಟ್ಟು ಮಕ್ಕಳು | ಸ್ಲೇಟಿನ ಚಿತ್ರಗಳು |
|---|---|---|
| ಕೋಳಿಮಲೆ ಎಲ್.ಪಿ. ಶಾಲೆ | 60 |  |
| ವಡಪುರಂ ಎಲ್.ಪಿ. ಶಾಲೆ | 60 | |
| ಮಾಮಲ್ಲಪುರಂ ಜಿ.ಎಲ್.ಪಿ. ಶಾಲೆ | 70 | |
| ಪತ್ತನಾಕುಳಂ ಎಲ್.ಪಿ. ಶಾಲೆ | 80 | |
| ಪಾಲತ್ತಿರ ಎಲ್.ಪಿ. ಶಾಲೆ | 40 | |
| ತಿರುಮಲ ಜಿ.ಎಲ್.ಪಿ. ಶಾಲೆ | 110 | |

# 11 ಹತ್ತುಸಾವಿರಕ್ಕಿಂತಲೂ ಆಚೆ

## ಹತ್ತು ಸಾವಿರ

■ ಗಣಿತ ಬೋರ್ಡನ್ನು ನೋಡಿದಿರಲ್ಲವೇ?

ಹತ್ತಿರದ ಮೂರು ಕೋಣೆಗಳಲ್ಲಿರುವ ಸಂಖ್ಯೆಗಳನ್ನು ಕೂಡಿಸಿದರೆ 10,000 ಸಿಗಬೇಕು. ಅಡ್ಡಕ್ಕೂ, ನೀಟಕ್ಕೂ ಹಾಗೂ ಮೂಲೆಯಿಂದ ಮೂಲೆಗೂ ಕೂಡಿಸಬಹುದು.




| | | | | | |
|---|---|---|---|---|---|
| 2000 | 9000 | 2000 | 1000 | 2000 | 1000 |
| 6000 | 6000 | 7000 | 6000 | 4000 | 3000 |
| 2000 | 3000 | 4000 | 3000 | 7000 | 6000 |
| 7000 | 6000 | 5000 | 3000 | 2000 | 1000 |
| 1000 | 8000 | 1000 | 5000 | 2000 | 5000 |




ಅಪ್ಪು ಮತ್ತು ಚಿನ್ನು ಕಂಡುಹಿಡಿದುದನ್ನು ನೋಡಿರಿ.

ಅದರಂತೆ ಮೊತ್ತ ಹತ್ತುಸಾವಿರ ಬರುವ ಮೂರು ಸಂಖ್ಯೆಗಳನ್ನು ಕಂಡುಹಿಡಿಯಿರಿ.

**ನಾನು ಕಂಡುಹಿಡಿದಿರುವುದು**



**ಗೆಳೆಯರು ಕಂಡುಹಿಡಿದಿರುವುದು**



KT 671-6/Maths-4 (K) (Vol-2)

## ಹತ್ತು ಸಾವಿರದಲ್ಲೆಷ್ಟು?

**10,000**

- ......... ನೂರುಗಳು
- ......... ಒಂದುಗಳು
- ......... ಸಾವಿರಗಳು
- ......... ಹತ್ತುಗಳು
- 1 ಹತ್ತುಸಾವಿರ

## ಜನಪರ

■ ಪ್ರಯಾಣದ ತೊಂದರೆಗಳನ್ನು ಪರಿಹರಿಸಲು ಮರುತಮಲೆ ಪಂಚಾಯತಿನ ಜನಪರ ಸಮಿತಿಯು 5 ಬಸ್ಸುಗಳನ್ನು ಖರೀದಿಸಿತು. ಒಂದು ದಿನಕ್ಕೆ ಬಸ್ಸುಗಳಿಂದ ಸಿಗುವ ಆದಾಯವನ್ನು ಕೆಳಗೆ ಕೊಡಲಾಗಿದೆ.




1 2 3 4 5

? ಪ್ರತಿಯೊಂದು ಬಸ್ಸಿನಿಂದ ಸಿಗುವ ಆದಾಯವೆಷ್ಟು?

1 [12385] 2 [ ] 3 [ ] 4 [ ] 5 [ ]

? ಆದಾಯವನ್ನು ಅಕ್ಷರಗಳಲ್ಲಿ ಬರೆದಾಗ

| | |
|---|---|
| 12385 | ಹನ್ನೆರಡು ಸಾವಿರದ ....... |
| 10,008 | ಹತ್ತು ಸಾವಿರದ ...... |
| 10,300 | |
| | |
| | |

? ಇವುಗಳನ್ನು ಸ್ಥಾನಬೆಲೆಗನುಗುಣವಾಗಿ ಪಟ್ಟಿ ಮಾಡುವ.

| | ಹತ್ತು ಸಾವಿರ | ಸಾವಿರ | ನೂರು | ಹತ್ತು | ಒಂದು |
|---|---|---|---|---|---|
| 12385 | 1 | 2 | 3 | 8 | 5 |
| 10008 | | | | | |
| 10300 | | | | | |
| 12000 | | | | | |
| 10020 | | | | | |

? ಆದಾಯವನ್ನು ಕ್ರಮೀಕರಿಸಿ ಬರೆಯಿರಿ.

ಅತೀ ಹೆಚ್ಚು ಆದಾಯ ______ ಕಡಿಮೆ ______

ಬ್ಯಾಂಕ್ ಸಾಲ ಮರುಪಾವತಿ, ಇಂಧನ, ಕೆಲಸಗಾರರ ಸಂಬಳ ಮೊದಲಾದ ಎಲ್ಲಾ ಖರ್ಚುಗಳು ಕಳೆದು 11495 ರೂಪಾಯಿ ಬಾಕಿ ಉಳಿಯಿತು. ಈ ಮೊತ್ತವನ್ನು ಯಾವ ಯಾವ ನೋಟುಗಳು ಹಾಗೂ ನಾಣ್ಯಗಳಾಗಿ ಬರೆಯಬಹುದು.

**11495**

......... ಒಂದುಗಳು

114 ನೂರು
9 ಹತ್ತು
5 ಒಂದು

10 ಸಾವಿರ
14 ನೂರು
9 ಹತ್ತು
5 ಒಂದು

11.........
4 .........
9 .........
5 .........

100 ನೂರು
149 .........
5 .........

......... ಹತ್ತು
......... ಒಂದುಗಳು

? ಬೇರೆ ಸಾಧ್ಯತೆಗಳನ್ನು ಪರೀಕ್ಷಿಸಿ ನೋಡಿದಿರಲ್ಲವೇ?

## ಸ್ಪರ್ಧೆ

- ಪಂಚಾಯತ್ ಮೈದಾನದಲ್ಲಿ ಫುಟ್‌ಬಾಲ್ ಆಟ ವೀಕ್ಷಿಸಲು 6 ಕೌಂಟರ್‌ಗಳಲ್ಲಾಗಿ ಟಿಕೇಟ್‌ಗಳನ್ನು ವಿತರಿಸಿದರು. ಪ್ರತಿಯೊಂದು ಕೌಂಟರ್‌ಗಳಿಂದ ಲಭಿಸಿದ ಆದಾಯವನ್ನು ಕೆಳಗಿನ ಪಟ್ಟಿಯಿಂದ ಕಂಡುಹಿಡಿಯಿರಿ.




| ರೂಪಾಯಿ ನೋಟುಗಳು / ಕೌಂಟರ್ | 1000 | 500 | 100 | 50 | 10 | 1 | ಒಟ್ಟು |
|---|---|---|---|---|---|---|---|
| 1 | 8 | 6 | 10 | 6 | 10 | – | 12400 |
| 2 | 8 | 5 | 10 | 10 | 2 | 5 | |
| 3 | 7 | 8 | 12 | 6 | 2 | 5 | |
| 4 | 10 | – | 10 | 10 | 32 | 5 | |
| 5 | 9 | 4 | – | 8 | 12 | 5 | |
| 6 | 12 | – | – | – | 5 | – | |

- ಪ್ರತಿಯೊಂದು ಕೌಂಟರಿನಿಂದ ಸಿಕ್ಕಿದ ವರಮಾನವನ್ನು ಕ್ರಮವಾಗಿ ಅಂಕೆಗಳಲ್ಲೂ, ಅಕ್ಷರಗಳಲ್ಲೂ ಬರೆಯಿರಿ.

| ಸಂಖ್ಯೆ | ಅಕ್ಷರಗಳಲ್ಲಿ |
|---|---|
| 11525 | |
| | |
| | |
| | |
| | |
| | |

■ ಸಂಖ್ಯೆಗಳನ್ನು ಸ್ಥಾನಬೆಲೆಗನುಸಾರವಾಗಿ ಬದಲಾಯಿಸಿ ಬರೆಯಿರಿ.

| | ಸಂಖ್ಯೆ | ಸ್ಥಾನಬೆಲೆ | | | | |
|---|---|---|---|---|---|---|
| 1 | | ☐ ಹತ್ತು ಸಾವಿರ | ☐ ಸಾವಿರ | ☐ ನೂರು | ☐ ಹತ್ತು | ☐ ಒಂದು |
| 2 | | ☐ | ☐ | ☐ | ☐ | ☐ |
| 3 | | ☐ | ☐ | ☐ | ☐ | ☐ |
| 4 | | ☐ | ☐ | ☐ | ☐ | ☐ |
| 5 | | ☐ | ☐ | ☐ | ☐ | ☐ |
| 6 | | ☐ | ☐ | ☐ | ☐ | ☐ |

## ಹತ್ತು ಸಾವಿರಗಳು ಸೇರುವಾಗ

■ ತರಕಾರಿಗಳನ್ನು ಬೆಳೆಸಲು ಗ್ರಾಮಪಂಚಾಯತು ವಾರ್ಡುಗಳಲ್ಲಿರುವ ಕೃಷಿ ಸಂಘಗಳಿಗೆ ಹತ್ತು ಸಾವಿರ ರೂಪಾಯಿಗಳಂತೆ ನೀಡಿತು. ವಾರ್ಡ್‌ನಂಬರ್ ಹಾಗೂ ಸಂಘಗಳ ಸಂಖ್ಯೆಗಳನ್ನು ಕೆಳಗೆ ನೀಡಲಾಗಿದೆ.

| ವಾರ್ಡ್ ನಂಬರ್ | ಸಂಘಗಳ ಸಂಖ್ಯೆ | ಸಂಘಗಳಿಗೆ ಲಭಿಸಿದ್ದು (ರೂಪಾಯಿಗಳು) | ಒಟ್ಟು (ರೂ) |
|---|---|---|---|
| I | 3 | 10000 + 10000 + 10000 | 30,000 |
| II | 6 | | |
| III | 7 | | |
| IV | 4 | | |
| V | 2 | | |
| VI | 5 | | |
| VII | 8 | | |
| VIII | 9 | | |

- ವಾರ್ಡ್ IX ರಲ್ಲಿ 10 ಸಂಘಗಳಿವೆ. ಹಾಗಾದರೆ ಒಟ್ಟು ಎಷ್ಟು ಹಣ ಸಿಕ್ಕಿರಬಹುದು? ▭

  ಇದನ್ನು ಒಂದು **ಲಕ್ಷ** ಎಂದು ಓದುವುದು
- 1,00,000 ದಲ್ಲಿ ಎಷ್ಟು ಹತ್ತುಸಾವಿರಗಳಿವೆ?
- ಸಾವಿರಗಳೋ?

? ವಾರ್ಡುಗಳಿಗೆ ನೀಡಿದ ಮೊತ್ತವನ್ನು ಕ್ರಮೀಕರಿಸಿ ಬರೆಯಿರಿ..

## ಸ್ವ-ಉದ್ಯೋಗ

- ಸ್ವ ಉದ್ಯೋಗ ಕೈಗೊಳ್ಳಲು ರಾಜು ಮತ್ತು ಬಿಜು ಬ್ಯಾಂಕಿನಿಂದ ಸಾಲ ಪಡೆದರು.
- ರಾಜು ಪ್ರತಿದಿನ 100 ರೂಪಾಯಿಯಂತೆ ಬ್ಯಾಂಕಿಗೆ ಮರುಪಾವತಿ ಮಾಡುತ್ತಾನೆ.

**ಬ್ಯಾಂಕ್ ಪಾಸ್ ಪುಸ್ತಕ** ಹೆಸರು : ರಾಜು

| ತಾರೀಕು | ಪಾವತಿಸಿದ ಹಣ (ರೂ.) | ಹಿಂತೆಗೆದುದು | ಬಾಕಿ ಮೊತ್ತ | ಬಾಕಿ ಮೊತ್ತ (ಅಕ್ಷರಗಳಲ್ಲಿ) |
|---|---|---|---|---|
| ಹಿಂದಿನ ಬಾಕಿ | | | 22500 | |
| 9/11/15 | 100 | | 22600 | ಇಪ್ಪತ್ತೆರಡು ಸಾವಿರದ ಆರುನೂರು |
| 10/11/15 | 100 | | 22700 | |
| 11/11/15 | | | | |
| 12/11/15 | | | | |
| 13/11/15 | | | | |
| 14/11/15 | | | | |

**ಕೂಡಿಸಿ ಮತ್ತು ಕಳೆದು**

| | | | | | | | | | |
|---|---|---|---|---|---|---|---|---|---|
| 9 | + | 1 | = | 10 | 10 | − | 1 | = | 9 |
| 99 | + | 1 | = | 100 | 100 | − | 1 | = | 99 |
| 999 | + | 1 | = | ......... | 1000 | − | 1 | = | ......... |
| 9999 | + | ..... | = | ............ | 10000 | − | ..... | = | ............ |
| ..... | + | 1 | = | ............... | 100000 | − | 1 | = | ............... |
| ..... | + | 1 | = | .................. | ................ | | | = | .................. |

- ಬಿಜು ವಾರಕ್ಕೊಮ್ಮೆ 1000 ರೂಪಾಯಿಗಳಂತೆ ಸಾಲ ಮರುಪಾವತಿ ಮಾಡುತ್ತಾನೆ.

**ಬ್ಯಾಂಕ್ ಪಾಸ್ ಪುಸ್ತಕ** ಹೆಸರು : ಬಿಜು

| ತಾರೀಕು | ಪಾವತಿಸಿದ ಹಣ (ರೂ.) | ಹಿಂತೆಗೆದುದು (ರೂ.) | ಬಾಕಿ ಮೊತ್ತ | ಬಾಕಿ ಮೊತ್ತ (ಅಕ್ಷರಗಳಲ್ಲಿ) |
|---|---|---|---|---|
| ಹಿಂದಿನ ಬಾಕಿ | | | 17000 | |
| 10/10/15 | 1000 | | 18000 | ಹದಿನೆಂಟು ಸಾವಿರ |
| 17/10/15 | 1000 | | 19000 | |
| 24/10/15 | | | | |
| 31/10/15 | | | | |
| 7/11/15 | | | | |
| 14/11/15 | | | | |



- 14/11/15 ರ ವರೆಗೆ ಪ್ರತಿಯೊಬ್ಬರು ಒಟ್ಟು ಎಷ್ಟು ಹಣವನ್ನು ಮರುಪಾವತಿ ಮಾಡಿರಬಹುದು?

ರಾಜು ☐ ಬಿಜು ☐

- ಹೆಚ್ಚು ಹಣವನ್ನು ಮರುಪಾವತಿ ಮಾಡಿದವರು ಯಾರು? ಎಷ್ಟು ಹೆಚ್ಚು?

## ಗಣಿತಶಾಸ್ತ್ರ

■ ಗಣಿತಶಾಸ್ತ್ರ ಪ್ರತಿಭಾನ್ವೇಷಣೆ ಪರೀಕ್ಷೆಯು ಪಂಚಾಯತಿನ 6 ಕೇಂದ್ರಗಳಲ್ಲಾಗಿ ನಡೆಯುತ್ತಿದೆ. ಪ್ರತಿಯೊಂದು ಕೇಂದ್ರದ ಮಕ್ಕಳಿಗೆ ಕ್ರಮಾನುಗತವಾದ ನಂಬರುಗಳನ್ನು ನೀಡಲಾಗಿದೆ.

? ಒಂದನೇ ಕೇಂದ್ರದ 24 ಮಕ್ಕಳಿಗೆ 10376 ರಿಂದ ನಂಬರುಗಳನ್ನು ನೀಡಲಾಗಿದೆ. ಅವರ ನಂಬರುಗಳನ್ನು ಕ್ರಮಾನುಗತವಾಗಿ ಬರೆಯಿರಿ.

? 22 ಮಕ್ಕಳು ಪರೀಕ್ಷೆ ಬರೆಯುವ ಎರಡನೇ ಕೇಂದ್ರದಲ್ಲಿ ಕೊನೆಯ ಮಗುವಿನ ನಂಬರ್ 26006 ಆದರೆ ಉಳಿದ ಮಕ್ಕಳ ನಂಬರುಗಳನ್ನು ಕ್ರಮಾನುಗತವಾಗಿ ಬರೆಯಿರಿ.

? ಮೂರನೇ ಕೇಂದ್ರದ 18 ಮಕ್ಕಳಿಗೆ 32008 ರಿಂದ ಆರಂಭವಾಗುವ ನಂಬರುಗಳನ್ನು ನೀಡಲಾಗಿದೆ. ಹಾಗಾದರೆ ಕೊನೆಯ ಮಗುವಿನ ನಂಬರು ಎಷ್ಟು?

? 42199 ರಿಂದ 42218 ರವರೆಗಿರುವ ನಂಬರುಗಳನ್ನು ನಾಲ್ಕನೇ ಕೇಂದ್ರದಲ್ಲಿ ನೀಡಲಾಗಿದೆ. ಹಾಗಾದರೆ ಇಲ್ಲಿ ಎಷ್ಟು ಮಕ್ಕಳು ಪರೀಕ್ಷೆ ಬರೆಯುತ್ತಿದ್ದಾರೆ?

? ಐದನೇ ಕೇಂದ್ರದ 10 ನೇ ಮಗುವಿನ ನಂಬರು 54038 ಆಗಿದೆ. ಹಾಗಾದರೆ ಒಂದನೇ ಹಾಗೂ 26ನೇ ಮಕ್ಕಳ ನಂಬರೆಷ್ಟು?

? ಆರನೇ ಕೇಂದ್ರದಲ್ಲಿ ಪರೀಕ್ಷೆ ಬರೆಯುವ ಒಂದು ಮಗುವಿನ ಕ್ರಮನಂಬರು ಮುಂದಿನಿಂದ 8 ನೇ ಹಾಗೂ ಹಿಂದಿನಿಂದ 11ನೆಯದು ಆಗಿದೆ. ಅವನ ನಂಬರ್ 66665 ಆದರೆ ಮೊದಲನೆಯ ಹಾಗೂ ಕೊನೆಯ ಮಕ್ಕಳ ನಂಬರುಗಳು ಎಷ್ಟು? ಹಾಗಾದರೆ ಆ ಕೇಂದ್ರದಲ್ಲಿ ಒಟ್ಟು ಎಷ್ಟು ಮಕ್ಕಳು ಪರೀಕ್ಷೆ ಬರೆಯುತ್ತಿದ್ದಾರೆ?

## ಭತ್ತದ ಕೃಷಿ

■ 20 ಎಕರೆಗಿಂತ ಹೆಚ್ಚು ಸ್ಥಳದಲ್ಲಿ ಭತ್ತದ ಕೃಷಿ ಮಾಡುವ 6 ಭತ್ತ ಬೆಳೆಗಾರರ ಒಕ್ಕೂಟಗಳನ್ನು ಪಂಚಾಯತು ಸನ್ಮಾನಿಸಿತು. ಭತ್ತ ಬೆಳೆಗಾರರ ಒಕ್ಕೂಟಗಳು ಉತ್ಪಾದಿಸಿದ ಭತ್ತದ ಅಳತೆಗಳನ್ನು ಕೆಳಗೆ ಕೊಡಲಾಗಿದೆ.



| ಭತ್ತ ಬೆಳೆಗಾರರ ಒಕ್ಕೂಟ | ಲಭಿಸಿದ ಭತ್ತದ ಅಳತೆ |
|---|---|
| 1 | 13 ಟನ್ನು 4 ಕ್ವಿಂಟಾಲ್ |
| 2 | ಹದಿನಾಲ್ಕು ಸಾವಿರದ ಇನ್ನೂರ ಹದಿನೆಂಟು ಕಿಲೋಗ್ರಾಂ |
| 3 | 160 ಕ್ವಿಂಟಾಲ್ 63 ಕಿಲೋಗ್ರಾಂ |
| 4 | 12 ಟನ್ 9 ಕ್ವಿಂಟಾಲ್ 8 ಕಿಲೋಗ್ರಾಂ |
| 5 | 15 ಟನ್ 4 ಕಿಲೋಗ್ರಾಂ |
| 6 | 11407 ಕಿಲೋಗ್ರಾಂ |

? ಲಭಿಸಿದ ಒಟ್ಟು ಭತ್ತದ ಅಳತೆ ಎಷ್ಟು ಕಿಲೋಗ್ರಾಂ ಆಗಿದೆ?

? ಅದು ಎಷ್ಟು ಟನ್ ಆಗಿದೆ?

? ಹೆಚ್ಚು ಭತ್ತ ಲಭಿಸಿದ ಭತ್ತದ ಬೆಳೆಗಾರರ ಒಕ್ಕೂಟ ಯಾವುದು? ಎಷ್ಟು?

■ ಒಂದನೇ ಸ್ಥಾನಕ್ಕೆ ತಲುಪಿದ ಭತ್ತದ ಬೆಳೆಗಾರರ ಒಕ್ಕೂಟಕ್ಕೆ 75000 ರೂಪಾಯಿಗಳು, ನಂತರ ಬರುವ ಸ್ಥಾನಗಳಿಗೆ ನೇರ ಮುಂದಿನ ಸ್ಥಾನ ಪಡೆದವರಿಗಿಂತ 10,000 ರೂಪಾಯಿ ಕಡಿಮೆ ಹಣವನ್ನು ಪಂಚಾಯತ್ ಬಹುಮಾನವಾಗಿ ನೀಡಿದೆ.



? ಪ್ರತಿಯೊಂದು ಭತ್ತದ ಬೆಳೆಗಾರರ ಒಕ್ಕೂಟಕ್ಕೆ ಎಷ್ಟು ರೂಪಾಯಿಯಂತೆ ಲಭಿಸಿತು?


## ಮಾಡಿ ನೋಡುವ



28549 ನ್ನು ಹೇಗೆಲ್ಲಾ ವ್ಯಾಖ್ಯಾನಿಸಬಹುದು?

2 ಹತ್ತುಸಾವಿರಗಳು 8 ಸಾವಿರ 5 ನೂರು 4 ಹತ್ತು 9 ಒಂದುಗಳು ಸೇರಿದಾಗ 28549 ಆಗುವುದಲ್ಲವೇ? ವಿಭಿನ್ನ ರೀತಿಯಲ್ಲಿ 28549 ನ್ನು ವ್ಯಾಖ್ಯಾನಿಸಿರಿ.

............. ಸಾವಿರಗಳು + 549 ಒಂದುಗಳು.




ಇದರಂತೆ 30735, 43087 ಎಂಬೀ ಸಂಖ್ಯೆಗಳನ್ನು ವ್ಯಾಖ್ಯಾನಿಸಿರಿ.

### ಐದಂಕೆ ಸಂಖ್ಯೆಗಳನ್ನು ಬರೆಯುವ

| | | | | | |
|---|---|---|---|---|---|
| 60 | 70 | 4000 | | | |
| 2 | 400 | 3 | 4 | 900 | |
| 30 | 700 | 2000 | 30000 | | |
| 20000 | 50 | 3 | 60000 | 7 | 6000 |

- ಮೇಲಿನ ಕೋಣೆಯಿಂದ ಐದು ಸಂಖ್ಯೆಗಳನ್ನು ಆರಿಸಿ ಐದಂಕೆ ಸಂಖ್ಯೆಗಳನ್ನು ಬರೆಯಿರಿ.

30000 + 2000 + 400 + 2 + 3 = 32405

................................................... =

................................................... =

................................................... =

................................................... =

### ಮಾಯಾ ಚೌಕ

| | | |
|---|---|---|
| | | |
| | | |
| | | |

51000, 52000, 53000, ...., 59000. ಒಂಭತ್ತು ಸಂಖ್ಯೆಗಳಿವೆ. ಈ ಸಂಖ್ಯೆಗಳನ್ನು ಉಪಯೋಗಿಸಿ ಒಂದು ಮಾಯಾ ಚೌಕವನ್ನು ರಚಿಸಿರಿ. ಅಡ್ಡಕ್ಕೂ ಉದ್ದಕ್ಕೂ ಹಾಗೂ ಮೂಲೆಯಿಂದ ಮೂಲೆಗೂ ಕೂಡಿಸಿ ನೋಡಿರಿ. ಇದರಂತೆ ಇನ್ನೊಂದು ಮಾಯಾ ಚೌಕವನ್ನು ರಚಿಸಿರಿ.

## ವಿಂಗಡಿಸಿ ಬರೆಯುವ

■ ಕೆಳಗೆ ನೀಡಿರುವ ಸಂಖ್ಯೆಗಳಿಂದ ಸೂಕ್ತವಾದುದನ್ನು ಆರಿಸಿ ಸಂಖ್ಯೆಗಳನ್ನು ವಿಂಗಡಿಸಿ ಬರೆಯಿರಿ.

| | | | | |
|---|---|---|---|---|
| 30000 | 3000 | | 200 | 8000 |
| | 500 | 20 | | |
| 3 | 400 | 5000 | | 60000 |
| 30 | | 5 | 10 | 7 |

35427 = 30000 + 5000 + 400 + 20 + 7

60423 =

80035 =

33020 =

## ನಮೂನೆಯನ್ನು ಪೂರ್ತಿಗೊಳಿಸಿರಿ

| | | | | | |
|---|---|---|---|---|---|
| 1. | 24000 | 25000 | 26000 | -------- | |
| 2. | 32200 | 32300 | 32400 | -------- | -------- |
| 3. | 39700 | 39800 | 39900 | -------- | -------- |
| 4. | 65000 | 67500 | 70000 | -------- | -------- |
| 5. | 50500 | -------- | -------- | 50800 | |
| 6. | 60700 | -------- | 60900 | -------- | 61100 |
| 7. | 80000 | 85000 | 90000 | -------- | -------- |

## ಕೂಡಿಸಿ ನೋಡುವ

```
  9 8 7 6 5 4 3 2 1 +
    8 7 6 5 4 3 2 1
      7 6 5 3 3 2 1
        - - - - - -
          - - - - -
            - - - -
              - - -
                - -
                  -
_____________________
1 0 8 3 6 7 6 2 6 9
```

```
1 2 3 4 5 6 7 8 9 +
1 2 3 4 5 6 7 8
1 2 3 4 5 6 7
- - - - - -
- - - - -
- - - -
- - -
- -
___________________
```

## ಪತ್ರಿಕಾ ವಾರ್ತೆ



ಉಣ್ಣಿಕುಟ್ಟನ್ ತರಗತಿಯಲ್ಲಿ ಓದಲು ತಯಾರಿಸಿದ ಪತ್ರಿಕಾವಾರ್ತೆಗಳನ್ನು ಕೆಳಗೆ ಕೊಡಲಾಗಿದೆ. ಅಕ್ಷರದಲ್ಲಿ ಬರೆದಿರುವ ಸಂಖ್ಯೆಗಳನ್ನು ಅದರ ಎದುರಿಗಿರುವ ಕೋಣೆಗಳಲ್ಲಿ ಅಂಕೆಗಳಲ್ಲಿ ಬರೆಯಿರಿ.

- ಸ್ಟೇಡಿಯಂ ಜನರಿಂದ ಕಿಕ್ಕಿರಿದು ತುಂಬಿತ್ತು.
  **ನಲುವತ್ತೆಂಟು ಸಾವಿರದ ಇನ್ನೂರ ಹದಿನೇಳು** ಜನರು ಕ್ರೀಡೆಯನ್ನು ವೀಕ್ಷಿಸಿದರು. ☐
- ಉಪಚುನಾವಣೆ : ಬಹುಮತ
  **ಇಪ್ಪತ್ತ ನಾಲ್ಕುಸಾವಿರದ ಎಂಟು** ☐
- ಪರಿಹಾರ ನಿಧಿಯಿಂದ **ಎಪ್ಪತ್ತುಸಾವಿರ ರೂಪಾಯಿ** ಮಂಜೂರು ಮಾಡಿದರು ☐
- ಓಣಂಗೆ **ಮೂವತ್ತೆರಡು ಸಾವಿರದ ಐನೂರ ಮೂವತ್ತಾರು** ಕಿಲೋಗ್ರಾಂ ಸಕ್ಕರೆ ಬಿಡುಗಡೆ ಮಾಡಿದರು ☐
- ತೆರಿಗೆಯಲ್ಲಿ **ಎಂಬತ್ತನಾಲ್ಕು ಸಾವಿರದ ಒಂಬೈನೂರ ಎಂಬತ್ತೆಂಟು** ರೂಪಾಯಿಗಳ ಹೆಚ್ಚಳ. ☐

## ನಲುವತ್ತು ಸಾವಿರಕ್ಕೆ ತಲುಪಬಹುದೋ?

ಒಂದು ನಿಶ್ಚಿತ ಸಂಖ್ಯೆಯನ್ನು ಸೇರಿಸುತ್ತಾ ನಲುವತ್ತುಸಾವಿರಕ್ಕೆ ತಲುಪಬೇಕು.

| | | |
|---|---|---|
| | 40 000 | |
| 38 000 | 37 500 | 35 000 |
| 36 000 | 30 000 | 35 000 |
| 25 000 | 34 000 | 32 500 |
| 32 000 | 20 000 | 30 000 |
| 30 000 | 27 500 | 15 000 |
| 28 000 | 10 000 | 25 000 |

ಇಪ್ಪತ್ತೆಂಟು ಸಾವಿರದಿಂದ ಆರಂಭಿಸಿ 2000 ದಂತೆ ಕೂಡಿಸುತ್ತಾ 40000 ಕ್ಕೆ ತಲುಪಿದರಲ್ಲವೇ?

10000ದಿಂದ ಆರಂಭಿಸಿ ಒಂದು ನಿಶ್ಚಿತ ಸಂಖ್ಯೆಯನ್ನು ಕೂಡಿಸುತ್ತಾ 40000 ಕ್ಕೆ ತಲುಪಬಹುದೇ?

25000 ದಿಂದ ಆರಂಭಿಸಿದರೋ?

### ಎಷ್ಟು ಐದಂಕೆಗಳು?

- 2, 6, 7, 9, 3 ಗಳನ್ನು ಉಪಯೋಗಿಸಿ ಅಂಕೆಗಳು ಆವರ್ತಿಸದೆ ಬರೆಯಬಹುದಾದ ಐದಂಕೆ ಸಂಖ್ಯೆಗಳನ್ನು ಬರೆಯಿರಿ.
- 4, 5, 8, 6, 9 ಗಳನ್ನುಪಯೋಗಿಸಿ ಅಂಕೆಗಳು ಆವರ್ತಿಸದೆ ಎಷ್ಟು ಐದಂಕೆ ಸಂಖ್ಯೆಗಳನ್ನು ಬರೆಯಬಹುದು?
- 8 ರ ಬದಲು ಸೊನ್ನೆಯಾದರೋ?

## ಪುನರವಲೋಕನ

| ಕಲಿಕಾ ಸಾಧನೆಗಳು | ನನಗೆ ಸಾಧ್ಯ | ಟೀಚರ ಸಹಾಯದೊಂದಿಗೆ ಸಾಧ್ಯ | ಇನ್ನೂ ಉತ್ತಮ ಪಡಿಸಬೇಕಾಗಿದೆ |
|---|---|---|---|
| **ಪಾಠ 6 : ಕೂಡಿಸದೆ ಕೂಡಿಸುವ** | | | |
| • ಒಂದು ನಿಶ್ಚಿತ ಸಂಖ್ಯೆಯಿಂದ ಆರಂಭಿಸಿ ಹತ್ತು ಸಾವಿರದವರೆಗೆ ಕ್ರಮವಾಗಿ ಬರೆಯುವುದು. | | | |
| • ಗುಣಾಕಾರ ಕ್ರಿಯೆಗಳನ್ನು ಉಪಯೋಗಿಸಿ ಸಮಸ್ಯಾ ಪರಿಹಾರವನ್ನು ಮಾಡುವುದು. | | | |
| • ಒಂದು ಸಂಖ್ಯೆಯನ್ನು ಇನ್ನೊಂದು ಸಂಖ್ಯೆಯಿಂದ ಗುಣಿಸಲು ಯೋಗ್ಯವಾದ ದಾರಿಯನ್ನು ಕಂಡುಕೊಂಡು ಸಮರ್ಥಿಸುವುದು. | | | |
| • 10, 100 ಗಳಿಂದ ಗುಣಿಸಲಿರುವ ಸುಲಭದಾರಿಯನ್ನು ವಿವರಿಸುವುದು. | | | |
| • ಒಂದು ಮತ್ತು ಹತ್ತರ ಸ್ಥಾನದಲ್ಲಿ ಸೊನ್ನೆ ಬರುವ ಸಂಖ್ಯೆಗಳಿಂದ ಗುಣಿಸಲಿರುವ ಸುಲಭದಾರಿಯನ್ನು ವಿವರಿಸುವುದು. | | | |
| • ಸಂಖ್ಯಾ ಸಂಬಂಧಗಳನ್ನು ಕಂಡುಹಿಡಿದು ನಿಗಮನಗಳನ್ನು ರೂಪೀಕರಿಸುವುದು. | | | |
| • ಒಂದು ಸಂಖ್ಯಾಶ್ರೇಣಿಯ ಮುಂದುವರಿಕೆಯನ್ನು ಕಂಡುಹಿಡಿದು ಯುಕ್ತಿಯನ್ನು ವಿವರಿಸುವುದು. | | | |
| • ಹೊಸ ಸಂಖ್ಯಾಶ್ರೇಣಿಗಳನ್ನು ರೂಪೀಕರಿಸುವುದು. | | | |
| • ಉತ್ತರಗಳನ್ನು ಅಂದಾಜಿಸಿ ಹೇಳುವುದು. | | | |
| • ಉತ್ತರಗಳನ್ನು ಬಾಯಿಲೆಕ್ಕಗಳ ಮೂಲಕ ಹೇಳುವುದು. | | | |
| **ಪಾಠ 7 : ಸಮಾನವಾದುದೂ ಬಾಕಿ ಇರುವುದು** | | | |
| • ಭಾಗಾಕಾರ ಕ್ರಿಯೆಗಳನ್ನು ಉಪಯೋಗಿಸಿ ಸಮಸ್ಯೆಯನ್ನು ಪರಿಹರಿಸುವುದು. | | | |

| ಕಲಿಕಾ ಸಾಧನೆಗಳು | ನನಗೆ ಸಾಧ್ಯ | ಟೀಚರ ಸಹಾಯದೊಂದಿಗೆ ಸಾಧ್ಯ | ಇನ್ನೂ ಉತ್ತಮ ಪಡಿಸಬೇಕಾಗಿದೆ |
|---|---|---|---|
| • ಭಾಗಾಕಾರ ಕ್ರಿಯೆಗಳನ್ನು ಉಪಯೋಗಪಡಿಸಬೇಕಾದ ವಿಭಿನ್ನ ಸಂದರ್ಭಗಳನ್ನು ವಿವರಿಸುವುದು.<br>• ಭಾಗಾಕಾರ ಕ್ರಿಯೆಗಳನ್ನು ಮಾಡಲು ವಿಭಿನ್ನ ದಾರಿಯನ್ನು ಕಂಡುಕೊಳ್ಳುವುದು.<br>• ಭಾಗಾಕಾರ ಕ್ರಿಯೆಗಳಿಗೆ ಸಂಬಂಧಿಸಿದ ಸಂಖ್ಯಾ ಸಂಬಂಧಗಳನ್ನು ಕಂಡುಹಿಡಿದು ನಿಗಮನಗಳನ್ನು ರೂಪೀಕರಿಸುವುದು.<br>• ಭಾಗಾಕಾರ ಕ್ರಿಯೆಗಳನ್ನು ಸರಿಯಾಗಿ ಮಾಡಿದ್ದಾರೋ ಎಂದು ಪರಿಶೋಧಿಸಲಿರುವ ರೀತಿಯನ್ನು ಕಂಡುಹಿಡಿದು ವಿವರಿಸುವುದು.<br>• ಒಂದು ಸಂಖ್ಯಾ ನಮೂನೆಯ ಮುಂದುವರಿಕೆ ಕಂಡುಹಿಡಿದು ಯುಕ್ತಿಯನ್ನು ವಿವರಿಸುವುದು.<br><br>**ಪಾಠ 8 : ಎರಡನೇ ಒಂದು ನಾಲ್ಕನೇ ಒಂದು**<br><br>• ಒಂದು ವಸ್ತುವನ್ನು/ನಿಶ್ಚಿತ ಸಂಖ್ಯೆಯ ವಸ್ತುಗಳನ್ನು ಅರ್ಧ ಮಾಡುವ ರೀತಿಯನ್ನು ವಿವರಿಸುವುದು.<br>• ನಿಶ್ಚಿತ ಆಕೃತಿಗಳನ್ನು ಅರ್ಧ ಮಾಡುವುದು. ರೀತಿಯನ್ನು ವಿವರಿಸುವುದು.<br>• $\frac{1}{2}$ ಭಾಗವನ್ನು ಗುರುತಿಸುವುದು.<br>• $\frac{1}{2}$ ವಾಗಿ ಪಾಲು ಮಾಡುವುದು.<br>• ಒಂದು ಆಯತವನ್ನು ವಿಭಿನ್ನ ರೀತಿಯಲ್ಲಿ $\frac{1}{2}$ ವಾಗಿ ಪಾಲು ಮಾಡುವುದು.<br>• $\frac{1}{2}$ ವಾಗಿ ಪಾಲು ಮಾಡುವುದಕ್ಕೆ ಸಂಬಂಧಿಸಿದ ಪ್ರಾಯೋಗಿಕ ಸಮಸ್ಯೆಗಳನ್ನು ಪರಿಹರಿಸುವುದು, ರೀತಿಯನ್ನು ವಿವರಿಸುವುದು. | | | |

| ಕಲಿಕಾ ಸಾಧನೆಗಳು | ನನಗೆ ಸಾಧ್ಯ | ಟೀಚರ ಸಹಾಯದೊಂದಿಗೆ ಸಾಧ್ಯ | ಇನ್ನೂ ಉತ್ತಮ ಪಡಿಸಬೇಕಾಗಿದೆ |
|---|---|---|---|
| • ವಿವಿಧ ರೂಪಗಳನ್ನು $\frac{1}{4}$ ಆಗಿ ಪಾಲು ಮಾಡುವುದು.<br>• ವಿವಿಧ ರೂಪಗಳನ್ನು ಪಾಲುಮಾಡಿದುದರಿಂದ $\frac{1}{2}$, $\frac{1}{4}$, $\frac{3}{4}$ ಎಂಬಿವುಗಳನ್ನು ಕಂಡುಹಿಡಿಯುವುದು. ಯುಕ್ತಿಯನ್ನು ವಿವರಿಸುವುದು.<br><br>**ಪಾಠ 9 : ದೂರ ಮತ್ತು ಭಾರ**<br>• ಉದ್ದದ ಮಾನ (ಯೂನಿಟ್) ಗಳು ತಮ್ಮೊಳಗಿರುವ ಪರಸ್ಪರ ಸಂಬಂಧವನ್ನು ವಿವರಿಸುವುದು.<br>• ಸಣ್ಣ ಅಳತೆಗಳನ್ನು ಸೂಕ್ಷ್ಮತೆಯಿಂದಲೂ, ನಿಖರತೆಯಿಂದಲೂ ಅಳೆಯುವುದು.<br>• ಉದ್ದದ ಅತೀ ದೊಡ್ಡ ಯೂನಿಟ್‌ಗಳಲ್ಲಿ ಒಂದಾದ ಕಿಲೋ ಮೀಟರನ್ನು ಅದಕ್ಕಿಂತ ಚಿಕ್ಕ ಯೂನಿಟ್‌ಗಳ ಜೊತೆಗಿನ ಸಂಬಂಧವನ್ನು ವಿವರಿಸುವುದು.<br>• ಉದ್ದದ ಅಳತೆಗಳನ್ನು ಒಳಗೊಂಡ ಪ್ರಾಯೋಗಿಕ ಸಮಸ್ಯೆಗಳನ್ನು ಪರಿಹರಿಸುವುದು.<br>• ಭಾರದ ವಿವಿಧ ಯೂನಿಟ್‌ಗಳು ತಮ್ಮೊಳಗೆ ಇರುವ ಸಂಬಂಧಗಳನ್ನು ವಿವರಿಸುವುದು. (ಕ್ವಿಂಟಲ್, ಟನ್)<br>• ಭಾರಕ್ಕೆ ಸಂಬಂಧಿಸಿದ ಪ್ರಾಯೋಗಿಕ ಸಮಸ್ಯೆಗಳನ್ನು ಪರಿಹರಿಸುವುದು. | | | |

| ಕಲಿಕಾ ಸಾಧನೆಗಳು | ನನಗೆ ಸಾಧ್ಯ | ಟೀಚರ ಸಹಾಯದೊಂದಿಗೆ ಸಾಧ್ಯ | ಇನ್ನೂ ಉತ್ತಮ ಪಡಿಸಬೇಕಾಗಿದೆ |
|---|---|---|---|
| **ಪಾಠ 10 : ಮಾಹಿತಿ ಸಂಗ್ರಹ** | | | |
| • ಲಭಿಸಿದ ವಿವರಗಳನ್ನು ಅಗತ್ಯಕ್ಕನುಗುಣವಾಗಿ ಪಟ್ಟಿ ಮಾಡುವುದು. | | | |
| • ಪಟ್ಟಿಯನ್ನು ವಿಶ್ಲೇಷಿಸಿ ನಿಗಮನಗಳನ್ನು ರೂಪೀಕರಿಸುವುದು. | | | |
| • ಸಂಗ್ರಹಿಸಿದ ವಿವರಗಳನ್ನು ಗೆರೆಗಳನ್ನು ಹಾಗೂ ಚಿತ್ರಗಳನ್ನು ಉಪಯೋಗಿಸಿ ಸೂಚಿಸುವುದು. | | | |
| • ಚಿತ್ರೀಕರಿಸಿದ ವಿವರಗಳನ್ನು ವಿಶ್ಲೇಷಿಸಿ ನಿಗಮನಗಳನ್ನು ರೂಪೀಕರಿಸುವುದು. | | | |
| **ಪಾಠ 11 : ಹತ್ತು ಸಾವಿರಕ್ಕೂ ಆಚೆ** | | | |
| • ಹತ್ತುಸಾವಿರವನ್ನು (10000) ವಿಭಿನ್ನ ರೀತಿಯಲ್ಲಿ ವ್ಯಾಖ್ಯಾನಿಸುವುದು. | | | |
| • ಸಾವಿರದ, ನೂರುಗಳ, ಹತ್ತುಗಳ ಹಾಗೂ ಒಂದುಗಳ ಗುಂಪುಗಳನ್ನು ಸೇರಿಸಿ ಐದಂಕೆ ಸಂಖ್ಯೆಗಳನ್ನು ರೂಪೀಕರಿಸುವುದು. | | | |
| • ಐದಂಕೆ ಸಂಖ್ಯೆಗಳನ್ನು ಸಂದರ್ಭಕ್ಕನುಗುಣವಾಗಿ ವ್ಯಾಖ್ಯಾನಿಸುವುದು. ಸಮಸ್ಯೆಯನ್ನು ಪರಿಹರಿಸುವುದು. | | | |
| • ಐದಂಕೆ ಸಂಖ್ಯೆಗಳನ್ನು ಸ್ಥಾನಬೆಲೆಗನುಗುಣವಾಗಿ ವಿಂಗಡಿಸಿ ಬರೆಯುವುದು. | | | |
| • ಐದಂಕೆ ಸಂಖ್ಯೆಗಳಿಂದ ಸಣ್ಣದು ಹಾಗೂ ದೊಡ್ಡ ಸಂಖ್ಯೆಗಳನ್ನು ಕಂಡುಹಿಡಿಯುವ ರೀತಿಯನ್ನು ವಿವರಿಸುವುದು. | | | |
| • ಐದಂಕೆ ಸಂಖ್ಯೆಗಳನ್ನು ಗಾತ್ರಕ್ಕನುಸರಿಸಿ ಕ್ರಮೀಕರಿಸುವುದು. | | | |

| ಕಲಿಕಾ ಸಾಧನೆಗಳು | ನನಗೆ ಸಾಧ್ಯ | ಟೀಚರ ಸಹಾಯದೊಂದಿಗೆ ಸಾಧ್ಯ | ಇನ್ನೂ ಉತ್ತಮ ಪಡಿಸಬೇಕಾಗಿದೆ |
|---|---|---|---|
| • ಐದಂಕೆ ಸಂಖ್ಯೆಗಳನ್ನು ಅಂಕೆಗಳಲ್ಲೂ ಅಕ್ಷರಗಳಲ್ಲೂ ಬರೆಯುವುದು.<br>• ನಮೂನೆಗಳ ಸಂಖ್ಯಾಸಂಬಂಧವನ್ನು ಕಂಡುಹಿಡಿದು ನಮೂನೆಗಳನ್ನು ಪೂರ್ತಿಗೊಳಿಸುವುದು. ಯುಕ್ತಿಯನ್ನು ವಿವರಿಸುವುದು.<br>• ಐದಂಕೆ ಸಂಖ್ಯೆಗಳನ್ನು ಕ್ರಮೀಕರಿಸಿ ಸಮಸ್ಯೆಯನ್ನು ಪರಿಹರಿಸುವುದು.<br>• ಐದಂಕೆ ಸಂಖ್ಯೆಗಳನ್ನೊಳಗೊಂಡ ಪ್ರಾಯೋಗಿಕ ಸಮಸ್ಯೆಗಳನ್ನು ಪರಿಹರಿಸುವುದು. ರೀತಿಯನ್ನು ವಿವರಿಸುವುದು. | | | |